ಭಾಷಾ ಶಿಕ್ಷಣದಲ್ಲಿ ಸಾಹಿತ್ಯದ ಪಾತ್ರ

ಡಾ. ಗಣೇಶ. ಯು. ಎಚ್.

ಇಂದು ವಿವಿಧ ಹಂತದ ಭಾಷಾ ಶಿಕ್ಷಣದಲ್ಲಿ ಸಾಹಿತ್ಯ ಕೃತಿಗಳ ಅಳವಡಿಕೆಯಾಗುತ್ತಿದೆ ಎಂಬ ಅರಿವಿನೊಂದಿಗೆ ನಾನು ಈ ಪ್ರಬಂಧವನ್ನು ಮಂಡಿಸುತ್ತಿದ್ದೇನೆ. ಈ ಪ್ರಬಂಧದ ಉದ್ದೇಶ ಅಂತಹ ಅಳವಡಿಕೆಯ ಸ್ವರೂಪ ಹಾಗೂ ಪರಿಣಾಮಾಕಾರಿತ್ವದ ಬಗೆಗೆ ಚರ್ಚಿಸುವುದಾಗಿಲ್ಲ. ಅಂತಹ ಚರ್ಚೆಗೆ ಒಂದು ವ್ಯಾಪಕ ಕ್ಷೇತ್ರಾಧ್ಯಯನ ಅಗತ್ಯವಾಗುತ್ತದೆ. ಈ ಪ್ರಬಂಧದ ಉದ್ದೇಶ ಈಗಾಗಲೇ ಪರಿಚಿತವಿರುವ, ಭಾಷಾಶಿಕ್ಷಣದಲ್ಲಿ ಸಾಹಿತ್ಯದ ಬಳಕೆ ಬೇಕೇ ಬೇಡವೇ ಎಂಬ, ಜಿಜ್ಞಾಸೆಯನ್ನು ಕೆಲವು ಹೊಸ ದೃಷ್ಟಿಕೋನಗಳಿಂದ ನೋಡಲು ಪ್ರಯತ್ನಿಸುವುದಾಗಿದೆ. ಅಂತಹ ಪ್ರಯತ್ನವು ಭಾಷಾಶಿಕ್ಷಣದಲ್ಲಿ ಸಾಹಿತ್ಯದ ಬಳಕೆಗೆ ಹೆಚ್ಚಿನ ಸಮರ್ಥನೆಗಳನ್ನು ಒದಗಿಸಬಲ್ಲದು ಎಂಬುದು ನನ್ನ ಗ್ರಹಿಕೆಯಾಗಿರುತ್ತದೆ. ಅಲ್ಲದೆ ಇಂತಹ ಸಮರ್ಥನೆಯು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ೨೦೦೫ರ ಆಶಯಗಳಿಗೆ ಪೂರಕವಾಗಿದೆ ಎಂಬುದು ಮಹತ್ವಪೂರ್ಣವಾಗುತ್ತದೆ.

ನಾನು ಈ ವಿಷಯವನ್ನು ಒಂದು ತಾತ್ವಿಕ ನೆಲೆಯಿಂದ ಪ್ರವೇಶಿಸುತ್ತಿದ್ದೇನೆ. ಆ ತಾತ್ವಿಕ ನೆಲೆಯೆಂದರೆ ಇಂದು ಮಾನವ ಸಮಾಜ ಹೆಚ್ಚು ಹೆಚ್ಚು ಉಪಕರಣಾತ್ಮಕ ದೃಷ್ಟಿಕೋನದತ್ತ (ಖಟಿಣಡಿಣಟಜಟಿಣಚಿಟ್ಘಣ ತುಜತಿ) ಒಲುತ್ತಿರುವುದರಿಂದ ಆಗುತ್ತಿರುವ ನಮ್ಮ ದಷ್ಟಿಕೋನಗಳ ಸ್ಥಿತ್ಯಂತರದ ಬಗೆಗಿನ ಪ್ರಜ್ಞೆಯ ನೆಲೆ.

ಹೀಗೆ ಹೇಳುವಾಗ ಉಪಕರಣಾತ್ಮಕ ದೃಷ್ಟಿಕೋನ ಎಂಬ ಪದಗಟ್ಟಿನ ಬಗೆಗೆ ವಿವರಣೆ ಅಗತ್ಯ. ಅದು ವಸ್ತುನಿಷ್ಠ ದೃಷ್ಟಿಕೋನಕ್ಕೆ (ಔಥರಿಜಥಿಣುತಜ ತುಜತಿ) ಪ್ರತಿಯಾದದ್ದು. ಈ ಎರಡೂ ಪದಗಟ್ಟುಗಳನ್ನು ವಿವರಿಸಲು ನಾನು ವಿಜ್ಞಾನಕ್ಷೇತ್ರದ ದೃಷ್ಟಾಂತವನ್ನು ಬಳಸಿಕೊಳ್ಳುತ್ತೇನೆ. ವಿಜ್ಞಾನದ ಕಲಿಕೆಗೆ ಎರಡು ಉದ್ದೇಶಗಳನ್ನು ಸೂಚಿಸಬಹುದು. ಈ ವಿಶ್ವದ ರಹಸ್ಯಗಳನ್ನು ಅರಿಯುವುದು, ಅವುಗಳ ಬಗೆಗೆ ಪಡೆಯುವ ಜ್ಞಾನದಿಂದ ಬೆರಗು ವಿಸ್ಮಯಗಳನ್ನು ತಾಳುವುದು, ಈ ವಿಸ್ಮಯ ನಮಗೆ ಬದುಕಿನ ಬಗೆಗೆ ಅಪಾರ ಕೌತುಕವನ್ನು, ಪ್ರೀತಿಯನ್ನು ಮೂಡಿಸುವುದು, ನಮ್ಮನ್ನು ಕುತೂಹಲ- ಅನ್ವೇಷಣೆ-ಹೆಚ್ಚು ಕುತೂಹಲ ಈ

ಬೆರಗಿನ ವರ್ತುಲದಲ್ಲಿ ತೊಡಗಿಸುವುದು ವಸ್ತುನಿಷ್ಠ ವಿಜ್ಞಾನ (ಔಭರಿಜಛಿಣiತಿe ಖಛಿiಜಟಿಛಿe). ವಿಜ್ಞಾನವು ನಮಗೆ ನೀಡುವ ಜ್ಞಾನವನ್ನು ಬದುಕನ್ನು ಉತ್ತಮಪಡಿಸಲು ಬಳಸಿಕೊಳ್ಳುವುದು, ತಂತ್ರಜ್ಞಾನದ ಬೆಳವಣಿಗೆ, ತಂತ್ರಜ್ಞಾನದ ಬೆಳವಣಿಗೆಯಿಂದ ಉದ್ಯಮಕ್ಷೇತ್ರದ ಬೆಳವಣಿಗೆ, ಹೆಚ್ಚು ಉದ್ಯೋಗಗಳ ಸೃಷ್ಟಿ ಇವೆಲ್ಲವೂ ಉಪಕರಣಾತ್ಮಕ ವಿಜ್ಞಾನ (ಖಟಿಣಡಿuಟಜಟಿಣಚಿಟ ,ಛಿiಜಟಿಛಿe)ದ ಅಂಗಗಳು. ಹೆಚ್ಚು ತಂತ್ರಜ್ಞಾನದ ಬೆಳವಣಿಗೆಯಿಂದ ಹೆಚ್ಚು ಉದ್ಯಮ, ಹೆಚ್ಚು ಲಾಭ, ಹೆಚ್ಚು ಲಾಭದಿಂದ ಬಂಡವಾಳದ ಬೆಳವಣಿಗೆ, ಹೆಚ್ಚಿದ ಬಂಡವಾಳದಿಂದ ಮತ್ತಷ್ಟು ಉದ್ಯಮ ಇದು , ಇದು ಉಪಕರಣಾತ್ಮಕ ವಿಜ್ಞಾನದ ವರ್ತುಲ. ಈ ವರ್ತುಲವು ಪ್ರಾಕೃತಿಕ ಸಂಪನ್ಮೂಲಗಳ ಅತಿಯಾದ ಬಳಕೆ, ಪರಿಸರ ಪ್ರದೂಷಣೆ ಇವುಗಳನ್ನು ಅನಿವಾರ್ಯವಾಗಿಸುವುದಲ್ಲದೆ ಇಂತಹ ಬೆಳವಣಿಗೆ ನಮ್ಮ ಚಿಂತನೆಯ ಸ್ವರೂಪವನ್ನೂ ಪ್ರಭಾವಿಸುತ್ತದೆ. ಬಳಕೆದಾರ ಸಂಸ್ಕೃತಿ ಮತ್ತು ಉಪಕರಣಾತ್ಮಕತೆ ಬದುಕಿನ ಎಲ್ಲಾ ಕ್ಷೇತ್ರಗಳನ್ನೂ ಇಂದು ವ್ಯಾಪಿಸಿದೆ. ಶಿಕ್ಷಣ, ಭಾಷೆಯ ಕಲಿಕೆ ಮುಂತಾದ ಸಂಗತಿಗಳೂ ಇದರಿಂದ ಹೊರತಾಗಿಲ್ಲ.

ಭಾಷಾ ಶಿಕ್ಷಣ ಹೇಗಿರಬೇಕು ಎನ್ನುವ ಪ್ರಶ್ನೆ ಮುನ್ನೆಲೆಗೆ ಬಂದುದು ಎರಡನೆಯ ಭಾಷೆಯ ಕಲಿಕೆಯ ಸಂದರ್ಭದಲ್ಲಿ. ಇದು ಭಾರತದಲ್ಲಿ ಇಂಗ್ಲಿಷ್ ಕಲಿಕೆಯನ್ನು ಕುರಿತಂತೆ ಮಾತ್ರವಲ್ಲ; ಯೂರೋಪ್ ನಲ್ಲಿ ಎರಡನೆಯ ಭಾಷೆಯ ಕಲಿಕೆಯನ್ನು ಕುರಿತಂತೆಯೂ ನಿಜ. ಇದರ ಹಿನ್ನೆಲೆ ೧೯೬೦ರ ದಶಕದಲ್ಲಿ ಬಂದ ನೋಮ್ ಚೋಮ್ಸ್ಕಿಯ ಭಾಷಾ ಸಾಮರ್ಥ್ಯ ಮತ್ತು ನಿರ್ವಹಣೆಯ ಸಿದ್ಧಾಂತ (ಅoಟರಿಜಣಜಟಿಛಿe ಚಿಟಿಜ ಕಜಡಿಜಿoಡಿಟಚಿಟಿಛಿe ಖಿhಜoಡಿಥಿ) ಹಾಗೂ ಯೂರೋಪ್ ನಲ್ಲಿ ಮೂಡಿದ ಯೂರೋಪಿಯನ್ ಸಾಮಾನ್ಯ ಮಾರುಕಟ್ಟೆ(ಖಛಿiಜಟಿಛಿe ಇuಡಿoರಿಜಚಿಟಿ ಅoಟಟoಟಿ ಒಚಿಡಿಞಜಣ). ಚೋಮ್‌ಸ್ಕಿಯ ಸಿದ್ಧಾಂತವು ಭಾಷೆಯ ಕಲಿಕೆಯಲ್ಲಿ ಕಲಿಯುವವರ ಮೇಲೆ ಒತ್ತನ್ನು ನೀಡಿತು. ಯೂರೋಪಿಯನ್ ಸಾಮಾನ್ಯ ಮಾರುಕಟ್ಟೆ ಉದ್ಯೋಗಕ್ಕಾಗಿ ವಲಸೆಯನ್ನು ಹಾಗೂ ಆ ಕಾರಣದಿಂದ ಎರಡನೆಯ ಭಾಷೆಯ ಕಲಿಕೆಯನ್ನು ಅನಿವಾರ್ಯವಾಗಿಸಿತು. ಭಾರತದಲ್ಲಿ ೧೯೯೦ರ ದಶಕದಿಂದ ಬಿರುಸುಗೊಂಡ ಉದಾರೀಕರಣ, ಖಾಸಗೀಕರಣ, ಮತ್ತು ಜಾಗತೀಕರಣ ಪ್ರಕ್ರಿಯೆ ಉದ್ಯೋಗಕ್ಕಾಗಿ ಇಂಗ್ಲಿಷ್ ಕಲಿಕೆಯನ್ನು ಅಗತ್ಯವಾಗಿಸಿತು. ಆಗ ಪಾರಂಪರಿಕವಾಗಿ ಇಂಗ್ಲಿಷ್ ಕಲಿಸುವ ಕ್ರಮವು, ವಿದ್ಯಾಲಯಗಳಿಂದ ಹೊರಬಂದ ವಿದ್ಯಾರ್ಥಿಗಳನ್ನು ಉದ್ಯೋಗಗಳಿಗೆ ಅರ್ಹರನ್ನಾಗಿಸಲು ವಿಫಲವಾಗಿದೆ ಎಂಬ ತೀರ್ಮಾನಕ್ಕೆ ಬರಲಾಯಿತು.

ಸಂವಹನ ಭಾಷಾ ಬೋಧನೆ(ಅಂಟಟಣಟಿಥಿಛಿಣಣuತಜ ಐಛಿಟಿಂಣಛಿಂಜ ಖಿಜಛಿಥಿಛಿಟಿಂ)ಗೆ ಆದ್ಯತೆ ಸಿಗಲಾರಂಭಿಸಿತು. ಮೊದ ಮೊದಲು ಸಂದರ್ಭಾಧಾರಿತ ಭಾಷಾ ಕಲಿಕೆ ಮತ್ತು ಆ ನಂತರ ಸಂವಹನದ ಮೂಲಕ ಕಲಿಕೆಗೆ ಒತ್ತನ್ನು ನೀಡಲಾಯಿತು. ಬದಲಾದ ಕಾಲಕ್ಕೆ ಅನುಗುಣವಾಗಿ ಶೀಘ್ರಕಲಿಕೆಯ ಅಂಗಡಿಗಳು ನಗರಗಳ ಬೀದಿಬೀದಿಗಳಲ್ಲಿ ತಲೆ ಎತ್ತಿದವು.

ಈ ರೀತಿಯ ಒಂದು ಪಲ್ಲಟದ ಹಿಂದೆ ನಾನು ಪ್ರಾರಂಭದಲ್ಲಿ ಹೇಳಿದ ಉಪಕರಣಾತ್ಮಕ ಚಿಂತನೆಯ ಪ್ರೇರಣೆಯೇ ಕಂಡು ಬರುತ್ತದೆ ಎನ್ನುವುದು ಸ್ಪಷ್ಟ. ಉದಾಹರಣೆಗೆ, "ನಿರ್ದಿಷ್ಟ ಉದ್ದೇಶಗಳಿಗಾಗಿ ಇಂಗ್ಲಿಷ್"(ಇಟಿಂಟ್ಠು ಜಿಂಡಿ ಖರಿಜಛಿಜಿಛಿ ಕಣಡಿರಿಂಖ) ಎಂಬ ಪದಗುಚ್ಛವೇ ಈ ಮಾತಿಗೆ ಸಾಕ್ಷಿ. ನಾನು ಈ ರೀತಿಯ ಇಂಗ್ಲಿಷ್ ಕಲಿಕೆ ಇರಬಾರದೆಂದಾಗಲೀ, ಶೀಘ್ರಭಾಷಾ ಬೋಧನೆಯ ಅಂಗಡಿಗಳು ಅಥವಾ ಸಂಸ್ಥೆಗಳು ಅನಗತ್ಯ ಎಂದಾಗಲೀ ಖಂಡಿತಾ ಹೇಳುತ್ತಿಲ್ಲ. ಒಂದು ಉದ್ಯೋಗವನ್ನು ದೊರಕಿಸಿಕೊಳ್ಳುವುದು ಇಂದು ಬದುಕಿನ ಮೂಲಭೂತ ಅಗತ್ಯವಾಗಿದೆ; ನಿಜ. ಆ ಉದ್ಯೋಗವನ್ನು ಪಡೆದುಕೊಳ್ಳಲು ಅಗತ್ಯವಾದ ಅರ್ಹತೆಗಳನ್ನು (ಅದು ಇಂಗ್ಲಿಷ್ ಭಾಷಾ ಜ್ಞಾನವಾಗಲೀ, ಗಣಕಯಂತ್ರದ ಜ್ಞಾನವಾಗಲೀ) ಪಡೆಯುವುದು ಸರಿಯಾದ ಕ್ರಮವೇ ಆಗಿದೆ. ಆದರೆ ಈ ಔದ್ಯೋಗಿಕ ಉದ್ದೇಶಗಳ ಪ್ರವಾಹದಲ್ಲಿ ಭಾಷಾ ಕಲಿಕೆಯ ಉನ್ನತ ಕಾಳಜಿಗಳು ಕೊಚ್ಚಿಹೋಗಬಾರದು ಎಂದು ನೆನಪು ಮಾಡಿಕೊಳ್ಳುವುದೇ ನನ್ನ ಪ್ರಬಂಧದ ಉದ್ದೇಶ.

ಒಂದು ಮಗುವಿನಿಂದ ಹಿಡಿದು ಪ್ರಬುದ್ಧನಾದ ವ್ಯಕ್ತಿಯವರೆಗೆ, ಬದುಕಿನ ಈ ಪ್ರಪಂಚದ ಎಲ್ಲಾ ಅನುಭವಗಳನ್ನು ಅರ್ಥೈಸಿ ಸ್ಪಷ್ಟಗೊಳಿಸಿಕೊಳ್ಳುತ್ತಾ ಹೋಗಲು ಇರುವ ಮಾಧ್ಯಮ ಭಾಷೆ. ಹಾಗಾಗಿ ಯಾವುದೇ ವಿಷಯದ ಕಲಿಕೆಯಲ್ಲಿಯೂ, ಅದು ವಿಜ್ಞಾನವಾಗಲೀ, ಮಾನವಿಕ ವಿಷಯಗಳಾಗಲೀ, ಸಮಾಜ ಶಾಸ್ತ್ರ (ವಿಜ್ಞಾನ) ಗಳಾಗಲೀ, ಭಾಷೆಗೆ ಪ್ರಮುಖ ಸ್ಥಾನವಿರುತ್ತದೆ. ಭಾಷೆಯಿಂದ ಹೊರತಾಗಿ ವಿಚಾರಗಳು ಇರುವುದು ಅಶಕ್ಯ. (ಇಲ್ಲಿ ಬೀಜಗಣಿತ ಮುಂತಾದ ಅಮೂರ್ತ ಸಂಕೇತಾಧಾರಿತ ವಿಷಯಗಳು ಅಪವಾದವಾಗಿ ಕಾಣಬಹುದಾದರೂ ಆ ಅಮೂರ್ತ ಸಂಕೇತಾಧಾರಿತ ಭಾಷೆಗಳ ಕಲಿಕೆಯೂ ಒಂದು ವಿಶೇಷ ಭಾಷಾಕಲಿಕೆಯೇ ಆಗಿರುತ್ತದೆ.) ಅಂದರೆ ಯಾವುದೇ ವಿಷಯದ ಸಮರ್ಥ ಗ್ರಹಿಕೆಯು ಸಂಬಂಧಿಸಿದ ಭಾಷೆಯ, ಆ ವಿಷಯವನ್ನು ಸಂವಹನಗೊಳಿಸುವ ಭಾಷೆಯ ಸಮರ್ಥಗ್ರಹಿಕೆಯನ್ನು ಆಧರಿಸಿರುತ್ತದೆ. ಹಾಗಿದ್ದರೆ ಭಾಷಾಕಲಿಕೆಯು ಶಿಕ್ಷಣದ ಪ್ರಮುಖ ತಳಪಾಯ ಎನ್ನುವುದಾದರೆ ಭಾಷೆಯನ್ನು ಕಲಿಯುವ ಪರಿಣಾಮಕಾರೀ ವಿಧಾನಗಳು,

ಉಪಾಯಗಳು, ಹಾಗೂ ತಂತ್ರಗಳೇನು? ಆ ಉಪಾಯ ಮತ್ತು ತಂತ್ರಗಳಲ್ಲಿ ಸಾಹಿತ್ಯವು ಒಂದು ಪ್ರಧಾನ ಸ್ಥಾನವನ್ನು ಹೊಂದಿರುತ್ತದೆಯೇ? ಈ ಪ್ರಶ್ನೆಗಳು ಇಲ್ಲಿ ಪ್ರಸ್ತುತವಾಗುತ್ತವೆ.

ಭಾಷೆಯ ಕಲಿಕೆಯಲ್ಲಿ ಸಾಹಿತ್ಯದ ಪಾತ್ರವು ಹಿಂದೆ ಒಂದು ಸ್ವತಃಸಿದ್ಧ ಸತ್ಯದಂತೆ ಸ್ವೀಕೃತವಾಗಿದ್ದಿತು. ಆದರೆ ಎರಡನೆಯ ಭಾಷೆಯಾದ ಇಂಗ್ಲಿಷ್ ಕಲಿಕೆಗೆ ಸಂಬಂಧಿಸಿದಂತೆ ಈ ನಿಲುವನ್ನು ಪ್ರಶ್ನಿಸಲಾಯಿತು. ಭಾಷೆಯ ಕಾರ್ಯಪ್ರಯೋಜನ ತತ್ವ ಎನ್ನಬಹುದಾದ ಒಂದು ನಿಲವು (ಖಿಜಚಿಛಿಥಿಟಿಂ ಂಜಿ ಈಣಟಿಛಿಣಿಂಟಿಚಿಟ ಇಟಿಂಟ್ಥು) ಪ್ರಚಲಿತಗೊಂಡು ಪ್ರಸಿದ್ಧಿಯನ್ನೂ ಪಡೆಯಿತು. ಈ ನಿಲುವಿನ ಹಿಂದಿನ ಜಾಗತಿಕ ರಾಜಕೀಯದ ಪ್ರಶ್ನೆ ಇಲ್ಲಿ ಅಪ್ರಸ್ತುತ. ಆದರೂ ಇಲ್ಲಿ ಸೂಕ್ಷ್ಮವಾಗಿ ಹೇಳಬಹುದಾದ ಸಂಗತಿಯೆಂದರೆ ಈ ರೀತಿಯ ಇಂಗ್ಲಿಷ್ ಕಲಿಕೆಯ ಹಿಂದೆ ಇದ್ದುದು ಬಹುರಾಷ್ಟ್ರೀಯ ಕಾರ್ಪೊರೇಟ್ ಜಗತ್ತಿಗೆ ಬೇಕಾದ ಕೆಲಸಗಾರರನ್ನು ಸಿದ್ಧಗೊಳಿಸುವ ಉದ್ದೇಶ. ಭಾಷೆಯ ಈ ಕಾರ್ಯಪ್ರಯೋಜನ ತತ್ವಕ್ಕೂ ಸಾಹಿತ್ಯದ ಮೂಲಕ ಭಾಷಾಕಲಿಕೆ ಎಂಬ ತತ್ವಕ್ಕೂ ಅಪಾರ ವ್ಯತ್ಯಾಸವಿದೆ.

ಕಾರ್ಯಪ್ರಯೋಜನ ತತ್ವವನ್ನು ಆಧರಿಸುವ ಎಷ್ಟೋ ಭಾಷಾಪಠ್ಯಗಳು ಭಾಷೆಯ ಕಲಿಕೆಗೆ ವಾಸ್ತವ ಜೀವನದ ಸಂದರ್ಭಗಳು ಎನ್ನಬಹುದಾದ ಸಂದರ್ಭಗಳನ್ನು, ಆದರೆ ಕೃತಕ ರಚನೆಗಳನ್ನು ಬಳಸಿಕೊಳ್ಳುತ್ತವೆ. ಈ ಪಠ್ಯಗಳು ಪ್ರಾರಂಭದಲ್ಲಿ ಸಂದರ್ಭಾಧಾರಿತ ರಚನೆಗಳಾಗಿದ್ದವು. ಇಂತಹ ಸಂದರ್ಭಾಧಾರಿತ ರಚನೆಗಳ ಬೋಧನೆ ಹೆಚ್ಚು ಪರಿಣಾಮಕಾರಿ ಆಗುವುದಿಲ್ಲ ಎನ್ನಿಸಿದಾಗ ಅಂತಹುದೇ ಪಠ್ಯಗಳನ್ನು ಸಂವಹನದ ಮೂಲಕ ಕಲಿಸುವ ಪ್ರಯತ್ನಗಳು ನಡೆದವು. ಉದಾಹರಣೆಗೆ ಒಬ್ಬ ಪ್ರಯಾಣಿಕ ಪ್ರಯಾಣಕ್ಕೆ ಮೊದಲು ರೈಲು ನಿಲ್ದಾಣದಲ್ಲಿ, ಬಸ್ಸು ನಿಲ್ದಾಣದಲ್ಲಿ, ವಿಮಾನ ನಿಲ್ದಾಣದಲ್ಲಿ ಬಳಸಬೇಕಾಗುವ ಭಾಷೆ ಹೇಗಿರಬೇಕು? ಒಂದು ದಿನಸಿ ಅಂಗಡಿಯಲ್ಲಿಯೋ, ತರಕಾರಿಗಳನ್ನೋ, ಹಣ್ಣುಗಳನ್ನೋ, ಬೇರಾವುದೋ ವಸ್ತುಗಳನ್ನು ಕೊಳ್ಳುವಾಗ ಬಳಸಬೇಕಾದ ಭಾಷೆ ಯಾವುದು? ಒಬ್ಬ ರೋಗಿಯು ವೈದ್ಯರನ್ನು ಕಾಣಲು ಹೋದಾಗ ಬೇಕಾಗುವ ವಾಕ್ಯರಚನೆಗಳು ಯಾವುವು? ಇಂತಹ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಪಠ್ಯಗಳನ್ನು ಸಿದ್ಧ ಮಾಡುವ ಕ್ರಮವಿದೆ. ಎಷ್ಟೋ ವೇಳೆ ಇಲ್ಲಿನ ಸಂಭಾಷಣೆಗಳಲ್ಲಿ ಒಂದು ರೀತಿಯ ಕೃತಕತೆ ಕಂಡು ಬರುತ್ತದೆ. ಭಾಷೆಯ ಬಳಕೆಯಲ್ಲಿರುವ ಬಹುಮುಖೀ ಸಾಧ್ಯತೆಗಳನ್ನು ಇಂತಹ ಪೂರ್ವಸಿದ್ಧ ಸಂಭಾಷಣೆಗಳು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ನಮ್ಮ ನಿಜಜೀವನದ ಸಂಭಾಷಣೆಗಳು

ಕೆಲವು ವ್ಯಾಕರಣ ಹಾಗೂ ವಾಕ್ಯರಚನಾ ಕ್ರಮದ ಚೌಕಟ್ಟಿನೊಳಗೆ ಇರಬೇಕಾಗುತ್ತದೆ ಎನ್ನುವುದು ನಿಜ. ಆದರೂ ಸಂಭಾಷಣೆಗಳು ಪೂರ್ವನಿರ್ಧಾರಿತ ಸೂತ್ರಗಳಂತೆ ಇರುವುದು ಸಾಧ್ಯವಿಲ್ಲ.

ಆದರೂ ಇಂತಹ ಪಠ್ಯಪದ್ಧತಿಗೆ ನನ್ನ ಆಕ್ಷೇಪಣೆ ಏನೂ ಇಲ್ಲ. ಆದರೆ ಈ ರೀತಿಯ ಕಲಿಕೆಯ ಗುರಿ ಜೀವನದ ಕೆಲವು ಸನ್ನಿವೇಶಗಳಿಗೆ ಮಿತಿಯಾಗುತ್ತದೆ. ಅಲ್ಲದೆ ಭಾಷಾ ಬೋಧನೆ ಇಂತಹ ಪಠ್ಯಗಳಿಗೆ ಮಿತಿಗೊಂಡರೆ ಭಾಷಾಕಲಿಕೆಯ ಸ್ವಾರಸ್ಯಕ್ಕೆ ಒಂದು ಮಿತಿಯನ್ನು ಒಡ್ಡುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ ನಾನು ಮುಂದೆ ಹೇಳಲಿರುವ ಭಾಷೆಯ ವಸ್ತುನಿಷ್ಠ ಆಶಯಗಳನ್ನು ಈ ಬೋಧನಕ್ರಮ ಅಥವಾ ಕಲಿಕಾಪದ್ಧತಿ ಪೂರೈಸುವುದಿಲ್ಲ.

ನನ್ನ ಪ್ರಬಂಧದ ಒತ್ತು ಭಾಷಾ ಶಿಕ್ಷಣದಲ್ಲಿ ಸಾಹಿತ್ಯದ ಪಾತ್ರವನ್ನು ಕುರಿತಾಗಿರುವುದರಿಂದ ನಾನು ಅದಕ್ಕೆ ಹೊರತಾದ ಬೋಧನೆಯ ಹಾಗೂ ಕಲಿಕೆಯ ಬಗೆಗಿನ ಮಿತಿಗಳನ್ನು ಸುದೀರ್ಘವಾಗಿ ಚರ್ಚಿಸಲು ಸಾಧ್ಯವಿಲ್ಲ. ಆದರೂ ಇಲ್ಲಿ ಹೇಳಬಹುದಾದ ಒಂದು ಮಾತೆಂದರೆ ಸಂವಹನಶೀಲ ಬೋಧನಾ- ಕಲಿಕಾ (ಅಂಟಟಣಟುಛಿಚಿಣuತಜ ಐಚಿಟಿಂಣಚಿಂಜ ಖಿಜಚಿಛಿಹಿಟಿಂ) ವಿಧಾನದಲ್ಲಿಯೂ ಸಾಹಿತ್ಯಕೃತಿಗಳನ್ನು ಅಳವಡಿಸಿಕೊಳ್ಳುವುದು ಸಾಧ್ಯ ಎನ್ನುವುದು. ಹಾಗೆ ಸಾಹಿತ್ಯಕೃತಿಗಳನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳುವುದು ಬೋಧಕರ ಅಥವಾ ಸುಗಮಕಾರರ ಚಾತುರ್ಯ ಹಾಗೂ ಅವರು ಪಡೆದಿರುವ ತರಬೇತಿಯನ್ನು ಅವಲಂಬಿಸಿರುತ್ತದೆ.

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ೨೦೦೫ರ ಕೆಲವು ಆತಂಕಗಳು ಹಾಗೂ ಆಶಯಗಳು

ಈ ನನ್ನ ಲೇಖನಕ್ಕೆ ಹಿನ್ನೆಲೆಯಾಗಿ, ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ೨೦೦೫ರಲ್ಲಿ ವ್ಯಕ್ತವಾಗಿರುವ, ಇಂದಿನ ಜಾಗತೀಕರಣಗೊಂಡಿರುವ ಜಗತ್ತಿನ ಶೈಕ್ಷಣಿಕ ಸನ್ನಿವೇಶದ ಬಗೆಗಿನ ಆತಂಕಗಳನ್ನೂ, ಮತ್ತು ಸಾಂಸ್ಕೃತಿಕ ಹಾಗೂ ಮೌಲ್ಯಶಿಕ್ಷಣದ ಬಗೆಗಿನ ಕಾಳಜಿಗಳನ್ನೂ ಪರಿಶೀಲಿಸುವುದು ಉಪಯುಕ್ತವಾಗುತ್ತದೆ. ಜಾಗತೀಕರಣಗೊಂಡ ಜಗತ್ತಿನಲ್ಲಿ ಶಿಕ್ಷಣವು ಐಹಿಕ ಯಶಸ್ಸಿನ ಮಾರ್ಗದಲ್ಲಿ ವೈಯಕ್ತಿಕ ಪೈಪೋಟಿಯ ಸಾಧನವಾಗುವ ಅಪಾಯವನ್ನು ಈ ಪಠ್ಯಕ್ರಮ ಚೌಕಟ್ಟಿನ ಪ್ರಸ್ತಾಪವು ಗುರುತಿಸುತ್ತದೆ.

ಒಂದು ಸ್ಪರ್ಧಾತ್ಮಕ ಆರ್ಥಿಕತೆಯಲ್ಲಿನ ವೈಯಕ್ತಿಕ ಆಕಾಂಕ್ಷೆಯು ಶಿಕ್ಷಣವನ್ನು ಒಂದು ಐಹಿಕ ಯಶಸ್ಸಿನ ಉಪಕರಣವನ್ನಾಗಿ ಕುಗ್ಗಿಸುತ್ತದೆ. ವ್ಯಕ್ತಿಯನ್ನು ಕೇವಲ ಸ್ಪರ್ಧಾತ್ಮಕ

ಸಂಬಂಧಗಳಲ್ಲಿ ಇರಿಸಿ ನೋಡುವ ದೃಷ್ಟಿಕೋನವು ಮಕ್ಕಳ ಮೇಲೆ ವಿವೇಚನಾರಹಿತ ಒತ್ತಡಗಳನ್ನು ಹೇರಿ ಮೌಲ್ಯಗಳನ್ನೇ ವಿಕೃತಗೊಳಿಸುತ್ತದೆ (ಪು. ೨, ನನ್ನ ಅನುವಾದ).

ಮುಂದುವರಿದು ಈ ಪ್ರಸ್ತಾಪವು ಮೌಲ್ಯ ಹಾಗೂ ಸಂಸ್ಕೃತಿಗಳ ಮಹತ್ವ ಹಾಗೂ ಅಪೇಕ್ಷಿತ ಸ್ವರೂಪಗಳನ್ನು ಕುರಿತು ಹೀಗೆ ಹೇಳಿದೆ: "ಒಂದು ಬಹುಸಾಂಸ್ಕೃತಿಕ ಸಮಾಜದಲ್ಲಿ ಶಾಂತಿ, ಮಾನವತೆ ಮತ್ತು ಸಹಿಷ್ಣುತೆಯ ಮೌಲ್ಯಗಳನ್ನು ಬೆಳೆಸಲು ಶಿಕ್ಷಣವು ಸಮರ್ಥವಾಗಬೇಕು."(ಪು.೨, ನನ್ನ ಅನುವಾದ). ಅಷ್ಟಲ್ಲದೆ, ಕಲಿಕೆಯನ್ನು ಒಂದು ಸಂತಸಮಯ ಚಟುವಟಿಕೆಯನ್ನಾಗಿಸುವ ಅಗತ್ಯವನ್ನು ಹೇಳುತ್ತಾ ಶಿಕ್ಷಣವು ವಿಸ್ತೃತ ಹಾಗೂ ಶಾಶ್ವತ ಮಾನವೀಯ ಮೌಲ್ಯಗಳು ಮತ್ತು ಆಕಾಂಕ್ಷೆಗಳ ತತ್ಕಾಲದ ಹಾಗೂ ಪ್ರಸಕ್ತ ಸನ್ನಿವೇಶದ ಅಭಿವ್ಯಕ್ತಿಯಾಗಬೇಕೆಂದು ಸೂಚಿಸುತ್ತದೆ(ಪು. ೯–೧೦). ಶಿಕ್ಷಣದ ಗುರಿಗಳನ್ನು ವಿವರಿಸುವಾಗ ಸೌಂದರ್ಯೋಪಾಸಕ ಅಭಿರುಚಿಗಳನ್ನು ಬೆಳೆಸುವ ಕಲೆ ಹಾಗೂ ಸಾಹಿತ್ಯದ ಕಲಿಕೆಯ ಬಗೆಗೆ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ೨೦೦೫ ಮಂಡಿಸುವ ವಿಚಾರಗಳು ಉಲ್ಲೇಖನೀಯ:

ಸೌಂದರ್ಯೋಪಾಸನೆ ಹಾಗೂ ಕಲೋಪಾಸನೆ ಮಾನವ ಜೀವನದ ಅವಿಭಾಜ್ಯ ಅಂಗ. ಕಲೆ, ಸಾಹಿತ್ಯ ಹಾಗೂ ಇತರ ಜ್ಞಾನಪ್ರಕಾರಗಳಲ್ಲಿರುವ ಸೃಜನಶೀಲತೆಯು ಬೇರೆ ಬೇರೆಯಾಗಿರದೆ ನಿಕಟ ಸಂಬಂಧ ಹೊಂದಿರುವುದಾಗಿದೆ. ಮಗುವಿನ ಸೃಜನಾತ್ಮಕ ಅಭಿವ್ಯಕ್ತಿಯನ್ನು ಹಾಗೂ ಸೌಂದರ್ಯೋಪಾಸಕ ಸಾಮರ್ಥ್ಯವನ್ನು ವೃದ್ಧಿಗೊಳಿಸುವ ಅವಕಾಶ ಹಾಗೂ ಮಾರ್ಗಗಳನ್ನು ಶಿಕ್ಷಣವು ಒದಗಿಸಬೇಕು. ಮಾರುಕಟ್ಟೆಯ ಶಕ್ತಿಗಳು ಉತ್ಪಾದಿಸುತ್ತಿರುವ ಅಭಿರುಚಿಗಳು ಹಾಗೂ ನಿಲುವುಗಳು ಸೃಷ್ಟಿಸುವ ಸೌಂದರ್ಯದ ಮರುಳಿನ ಈ ಕಾಲದಲ್ಲಿ ಸೌಂದರ್ಯೋಪಾಸನೆ ಹಾಗೂ ಸೃಜನಶೀಲತೆಗಾಗಿ ನೀಡುವ ಶಿಕ್ಷಣ ಮಹತ್ವಪೂರ್ಣದ್ದಾಗುತ್ತದೆ. ಶಿಕ್ಷಣದ ಮೂಲಕ ಸೌಂದರ್ಯವನ್ನು ಅದರ ವಿವಿಧ ರೂಪಗಳಲ್ಲಿ ಆಸ್ವಾದಿಸಲು ವಿದ್ಯಾರ್ಥಿಗಳಿಗೆ ಸಾಧ್ಯವಾಗಬೇಕು. ವಿಕಲಚೇತನರು ಹಾಗೂ ಮಹಿಳೆಯರ ಘನತೆಗೆ ಕುಂದು ತರುವಂತಹ ಸೌಂದರ್ಯದ ಕಲ್ಪನೆಗಳ ರೂಢಮಾದರಿಗಳ (ಣಜಡಿಜಂಣಥಿಠಿಞ) ಹಾಗೂ ರಂಜನೆಯ ರೂಪಗಳ ಅಥವಾ ರಚನೆಗಳ (ಜಿಂಡಿಟ ಂಜಿ ಜಟೆಣಜಡಿಣಚಿಟಿಟಜಟೆಣ) ಉಚ್ಚಾಟನೆ ಅತ್ಯಗತ್ಯ(ಪು. ೧೦, ನನ್ನ ಪರಿಷ್ಕೃತ ಅನುವಾದ).

ಈಗಾಗಲೇ ಚರ್ಚಿಸಿರುವ ಇತರ ಅಂಶಗಳಲ್ಲದೆ, ವಿಕಲಚೇತನರನ್ನು ಅಪಹಾಸ್ಯದ ವಸ್ತುಗಳನ್ನಾಗಿಸುವ, ಸ್ತ್ರೀ ಸೌಂದರ್ಯವನ್ನು ಮಾರುಕಟ್ಟೆಯ ಸರಕಾಗಿಸುವ ಪ್ರವೃತ್ತಿಗಳ ವಿರುದ್ಧ ಇಲ್ಲಿರುವ ಎಚ್ಚರಿಕೆಯನ್ನು ಗಂಭೀರವಾಗಿ ಪರಿಗಣಿಸುವುದು ಸೂಕ್ತ.

ಒಟ್ಟಿನಲ್ಲಿ ಗಮನಿಸಬೇಕಾದ ಸಂಗತಿ ಎಂದರೆ, ಶಿಕ್ಷಣದಲ್ಲಿ ಹಾಗೂ ಅದರ ಅವಿಭಾಜ್ಯ ಅಂಗವಾದ ಭಾಷಾಕಲಿಕೆಯಲ್ಲಿ ಸಾಹಿತ್ಯಕ್ಕಿರುವ ಸ್ಥಾನವನ್ನು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ೨೦೦೫ರ ಪ್ರಸ್ತಾಪಗಳು ಮುನ್ನೆಲೆಗೆ ತರುತ್ತದೆ ಎಂಬುದು. ಈ ಪ್ರಸ್ತಾಪಗಳಲ್ಲಿ, ನಾನು ಈ ಲೇಖನದಲ್ಲಿ ಚರ್ಚಿಸಿರುವಂತೆಯೇ, ಶಿಕ್ಷಣವು ಒಂದು ಉಪಕರಣಾತ್ಮಕ ನೆಲೆಗೆ ಸಂಕುಚಿತಗೊಳ್ಳಬಹುದಾದ ಬಗೆಗಿನ ಆತಂಕದ ಅಭಿವ್ಯಕ್ತಿಯಿದೆ; ಹಾಗೆಯೇ ಆ ಆತಂಕದ ನಿವಾರಣೆಯ ಹಾದಿಯಲ್ಲಿ ಕಲೆ ಹಾಗೂ ಸಾಹಿತ್ಯಶಿಕ್ಷಣಕ್ಕಿರುವ ಪಾತ್ರದ ಬಗೆಗಿನ ಒಳನೋಟಗಳೂ ಇವೆ.

ಭಾಷಾಕಲಿಕೆ ಹಾಗೂ ಶಿಕ್ಷಣದಲ್ಲಿ ಸಾಹಿತ್ಯದ ಪ್ರಯೋಜನಗಳು

ನಾನು ಇನ್ನು ಮುಂದೆ ಭಾಷೆಯ ಕಲಿಕೆ ಹಾಗೂ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಾಹಿತ್ಯವು ಪ್ರಯೋಜನಕಾರಿಯಾಗಬಲ್ಲ ಸಂಗತಿಗಳನ್ನು ಸೂಚಿಸಿ ಚರ್ಚೆಗೆ ತೊಡಗುತ್ತೇನೆ. ಶಿಕ್ಷಣದ ಕೆಲವು ಆಯಾಮಗಳಲ್ಲಿ ಸಾಹಿತ್ಯದ ಕಲಿಕೆ ಪೂರಕವಾಗುವ ಸಂದರ್ಭಗಳು ಅನೇಕ. ಸಂವೇದನಾ ಶೀಲತೆ, ಕಲ್ಪನಾ ಸಾಮರ್ಥ್ಯ, ಸೌಂದರ್ಯೋಪಾಸಕ ದೃಷ್ಟಿ ಮುಂತಾದ ಅನೇಕ ಸಾಮರ್ಥ್ಯಗಳ ಬೆಳವಣಿಗೆಗೆ ಸಾಹಿತ್ಯದ ಓದು ಸಹಾಯಕ. ಈ ಸಾಮರ್ಥ್ಯಗಳು ಭಾಷಾಕಲಿಕೆಗೂ ಉಪಯುಕ್ತ. ಸಾಮಾಜಿಕ, ರಾಜಕೀಯ ಹಾಗೂ ಚಾರಿತ್ರಿಕ ಪ್ರಜ್ಞೆ, ಮನರಂಜನೆ ಹಾಗೂ ಮನೋವಿಕಾಸ, ಸಾಮಾಜಿಕ ಸಾಂಸ್ಕೃತಿಕ ಪರಂಪರೆಯ ಅರಿವು ಸೇರಿದಂತೆ ಸಾಹಿತ್ಯದ ಕಲಿಕೆಯ ಉಪಯೋಗಗಳು ಹಲವು ಬಗೆಯವು. ಆದರೆ ನಾನು ಇಲ್ಲಿ ಈ ಪ್ರಬಂಧದ ಮಿತಿಯಲ್ಲಿ ಸಾಹಿತ್ಯದ ಮೂಲಕ ಭಾಷಾಕಲಿಕೆಯ ಪ್ರಯೋಜನಗಳ ಕೆಲವು ಸಂದರ್ಭಗಳನ್ನು ಮಾತ್ರ ಚರ್ಚಿಸಲಿದ್ದೇನೆ. ಈ ಸಂದರ್ಭಗಳನ್ನು ಹೀಗೆ ಪಟ್ಟಿ ಮಾಡಬಹುದು. ೧) ಸ್ಮರಣಶಕ್ತಿಯ ಬೆಳವಣಿಗೆ, ೨) ಭಾಷಾ ಸೂಕ್ಷ್ಮತೆ ಹಾಗೂ ಹೊಸ ಅರ್ಥಗಳ ಉದ್ದೀಪನ, ೩) ವಿಚಾರಗಳ ತಾರ್ಕಿಕ ಬೆಳವಣಿಗೆ ಹಾಗೂ ಮಂಡನೆಯ ಸಾಮರ್ಥ್ಯ ೪) ಸಾಂಸ್ಕೃತಿಕ ಅರಿವು ಹಾಗೂ ೫) ಮೌಲ್ಯಪ್ರಜ್ಞೆ. ಈ ಪಟ್ಟಿಯಲ್ಲಿ ಮೂರು ಮತ್ತು ನಾಲ್ಕನೆಯ

ಸಂಗತಿಗಳಾದ ಸಾಂಸ್ಕೃತಿಕ ಅರಿವು ಮತ್ತು ಮೌಲ್ಯಪ್ರಜ್ಞೆ ಭಾಷಾಕಲಿಕೆಗೆ ಹೊರತಾದ ನೀತಿಶಾಸ್ತ್ರೀಯ ಸಂಗತಿಗಳು ಎನ್ನಿಸಬಹುದು. ಆದರೆ ನನ್ನ ಉದ್ದೇಶ ಈ ಸಾಂಸ್ಕೃತಿಕ ಅರಿವು ಮತ್ತು ಮೌಲ್ಯಪ್ರಜ್ಞೆ ಎಂಬ ಸಂಗತಿಗಳು ವಿಜ್ಞಾನ, ತಂತ್ರಜ್ಞಾನ ಹಾಗೂ ವೈದ್ಯಕೀಯ ಶಿಕ್ಷಣವೂ ಸೇರಿದಂತೆ ಒಟ್ಟಾರೆಯಾಗಿ ಯಾವುದೇ ಶಿಕ್ಷಣದ ಅನಿವಾರ್ಯ ಹಾಗೂ ಅತ್ಯಗತ್ಯ ಘಟಕಗಳು ಎಂದು ಸೂಚಿಸುವುದು.

೧) ಸ್ಮರಣಶಕ್ತಿಯ ಬೆಳವಣಿಗೆ.

ಯಾವುದೇ ವಿಷಯದ ಕಲಿಕೆಯಲ್ಲಿಯೂ ಮಗುವಿನ ಸ್ಮರಣಶಕ್ತಿಯ ಬೆಳವಣಿಗೆ ಅತ್ಯಗತ್ಯ. ಈ ಮಾತಿನ ಅರ್ಥ ಮಕ್ಕಳು ವಿಷಯಗಳನ್ನು ಉರು ಹಚ್ಚುವುದರಿಂದ ಅವರಿಗೆ ಆ ಜ್ಞಾನ ಲಭಿಸುತ್ತದೆ ಎಂದಲ್ಲ. ಸ್ಮರಣಶಕ್ತಿಯ ಪರಿಕಲ್ಪನೆ ಹಾಗೂ ಮಹತ್ವದ ಬಗೆಗೆ ಅಪಾರವಾದ ತಪ್ಪುಕಲ್ಪನೆಗಳಿರುವುದು ಕಳೆದ ವರ್ಷ (೨೦೧೮ರಲ್ಲಿ) "ತೆರೆದ ಪಠ್ಯಗಳ ಪರೀಕ್ಷಾಕ್ರಮ"ದ ಬಗೆಗಿನ ಶಿಕ್ಷಣಮಂತ್ರಿಗಳ ಪ್ರಸ್ತಾಪ ಉಂಟುಮಾಡಿದ ಚರ್ಚೆಗಳಿಂದ ತಿಳಿದುಬರುತ್ತದೆ. ಆದ್ದರಿಂದ ಸ್ಮರಣಶಕ್ತಿಯ ಬಗೆಗೆ ಸರಿಯಾದ ಅರಿವಿನ ಅಗತ್ಯವಿದೆ. ಒಂದು ಸಂಗತಿಯ ಜ್ಞಾನ ಎನ್ನುವುದು ಆ ಸಂಗತಿಯ ಬಗೆಗಿನ ನೆನಪಿನೊಂದಿಗೆ ಸಂಬಂಧ ಪಡದೇ ಇರುವಂತಹುದಲ್ಲ. ಒಂದು ಸರಳ ಉದಾಹರಣೆಯ ಮೂಲಕ ಈ ವಿಷಯವನ್ನು ಸ್ಪಷ್ಟಪಡಿಸಬಹುದು. ಒಬ್ಬ ವಿದ್ಯಾರ್ಥಿಗೆ, "ನಿನಗೆ ಭಾರತದ ರಾಜಧಾನಿ ಯಾವುದು ಎಂದು ಗೊತ್ತೇ?" ಎಂದು ಕೇಳಿದಾಗ ಅವನು, " ನನಗೆ ಗೊತ್ತು," ಎನ್ನುತ್ತಾನೆ. "ಅದು ಯಾವುದು ಹೇಳು," ಎಂದಾಗ ಅವನು "ನನಗೆ ಅದು ಗೊತ್ತು, ಆದರೆ ನೀವು ಪುಸ್ತಕ ಕೊಟ್ಟರೆ ಅದನ್ನು ನೋಡಿ ಹೇಳುತ್ತೇನೆ," ಎಂದರೆ ಅವನಿಗೆ ಭಾರತದ ರಾಜಧಾನಿ ಯಾವುದು ಎಂದು ಗೊತ್ತಿಲ್ಲ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ಒಬ್ಬನು ನನಗೆ ಮನೆಗೆ ಹೋಗುವ ದಾರಿ ಗೊತ್ತು ಎಂದರೆ ಅವನಿಗೆ ತಾನು ಯಾವ ಮಾರ್ಗವಾಗಿ ಹೋಗಬೇಕು ಎಂಬ ನೆನಪಿದೆ ಎಂದು ಅರ್ಥ. ಅಂದರೆ ಜ್ಞಾನ ಎನ್ನುವುದು ಸ್ಮರಣಶಕ್ತಿಯೊಂದಿಗೆ ತಳುಕು ಹಾಕಿಕೊಂಡಿದೆ. ಸ್ಮರಣಶಕ್ತಿಯ ಬೆಳವಣಿಗೆ ಯಾವುದೇ ಜ್ಞಾನಾರ್ಜನೆಗೆ ಅಗತ್ಯ ಎನ್ನುವುದಾದರೆ ಸಾಹಿತ್ಯದ ಕಲಿಕೆಗೆ ಒಟ್ಟಾರೆಯಾಗಿ ಶಿಕ್ಷಣದಲ್ಲಿಯೇ ಒಂದು ಪಾತ್ರವಿದೆ.

ಅಂದರೆ ಸ್ಮರಣಶಕ್ತಿಯ ಬೆಳವಣಿಗೆಯಲ್ಲಿ ಸಾಹಿತ್ಯಕ್ಕೆ ಮಹತ್ವದ ಸ್ಥಾನವಿದೆ. ಹೀಗೆಂದಾಗ ಸಾಹಿತ್ಯ ಎಂದರೆ ಏನು ಎಂಬ ಪ್ರಾಥಮಿಕ ಜ್ಞಾನವಾದರೂ ಅಗತ್ಯವಾಗುತ್ತದೆ. ಸಾಹಿತ್ಯ

ಎಂಬ ಪರಿಕಲ್ಪನೆಯನ್ನು ಬದುಕಿನ ಕಲ್ಪನಾಶೀಲ ಅನುಭವಗಳನ್ನು, ತನ್ನೆಡೆಗೇ ಗಮನ ಸೆಳೆಯುವ ಭಾಷೆಯಲ್ಲಿ ಪ್ರತಿನಿಧಿಸುವ ಸಾಂಸ್ಕೃತಿಕ ಆಚರಣೆ ಎನ್ನಬಹುದು. (ಖ ತಿಂಣಟಜ ಚಿಣಣಜಟರಿಣ ಚಿ ಜಜಜಿಟಿಣುಂಟಿ ಂಜಿ ಟುಣಜಡಿಚಿಣಣಡಿಜ ುಟಿ ಣುಜ ಜಿಂಟಟಂತುಟಿಂ ತಿಂಡಿಞ: ಖುಣಜಡಿಚಿಣಣಡಿಜ ು ಚಿ ಛಿಣಟಣಣಡಿಚಿಟ ರಿಡಿಚಿಛಿಣುಛಿಜ, ಚಿ ಜಿುಜಟಜ ಂಜಿ ಛಿಣಟಣಣಡಿಜ ಣುಚಿಣ ುಟಿತಂಟತಞ ಣುಜ ಡಿಜರಿಡಿಞಜಟಿಣಚಿಣುಂಟಿ ಂಜಿ ಚಿಟಿ ುಟಚಿಯುಟಿಚಿಣುತಜ ಜಥರಿಜಡಿುಜಟಿಛಿಜ ಂಜಿ ಟುಜಿಜ, ುಟಿ ಚಿಟಿ ುಜುಂಟ ಣುಚಿಣ ಜಡಿಚಿತಿ ಚಿಣಣಜಟಿಣುಂಟಿ ಣಂ ುಣಞಜಟಜಿ.) ಸಾಹಿತ್ಯದ ಪ್ರಕಾರಗಳು ಹಲವು: ಮಹಾಕಾವ್ಯ; ಕಾವ್ಯ; ಸಣ್ಣ ಕಥೆ, ಕಿರುಕಾದಂಬರಿ, ಕಾದಂಬರಿಗಳನ್ನೊಳಗೊಂಡ ಕಥಾನಕಗಳು; ನಾಟಕ, ಪ್ರವಾಸ ಸಾಹಿತ್ಯ; ಜೀವನಚರಿತ್ರೆ; ಪ್ರಬಂಧ, ವಿಚಾರಸಾಹಿತ್ಯ ಮುಂತಾಗಿ. ಕಾವ್ಯವನ್ನು ಒಂದು ಸ್ಮರಣತಂತ್ರ (ಟಟಿಜಟಂಟಿಛಿ ಜಜತುಛಿಜ) ಎಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಕಾವ್ಯ ಅದರ ಲಯಭರಿತ ಪ್ರಾಸಬದ್ಧ ಭಾಷೆಯಿಂದಾಗಿ ಹಾಗೂ ಮನಮುಟ್ಟುವ ಪ್ರತಿಮೆಗಳಿಂದಾಗಿ ನಮ್ಮ ಸ್ಮರಣೆಯಲ್ಲಿ ದೀರ್ಘಕಾಲ ಉಳಿಯಬಲ್ಲದು. ಕಾವ್ಯದ ಅಭ್ಯಾಸ ಮಿದುಳಿನಲ್ಲಿ ಸ್ಮರಣಶಕ್ತಿಯನ್ನು ಸಧೃಡಗೊಳಿಸಲು ಉಪಯುಕ್ತ. ನನ್ನದೇ ಅನುಭವದಿಂದ ಹೇಳಿದರೆ ನಾನು ಪ್ರಾಥಮಿಕ ಶಾಲೆಯಲ್ಲಿ ಓದಿದ "ಮರುಳು ಕಾಗೆ" ಎಂಬ ಕವನದ ಕೆಲವು ಸಾಲುಗಳನ್ನು ನಾನು ಮತ್ತೆಂದೂ ಓದದಿದ್ದರೂ ಮರೆಯಲು ಸಾಧ್ಯವಾಗಲಿಲ್ಲ.

ಕಾಕರಾಜ ನೀನು ನಮ್ಮ

ವನಕೆ ಬಹಳ ದಿನಕೆ ಬಂದೆ

ನಿನ್ನ ಕಂಡು ನನ್ನ ಮನಕೆ ಹರುಷವಾಯಿತು. (ಸಿ. ಫ. ಕಟ್ಟೀಮನಿ, ತಟ್ಟು ಚಪ್ಪಾಳೆ ಪುಟ್ಟ ಮಗು, ಪು ೧೨೮-೧೨೯)

ಈ ಸಾಲುಗಳು ಏಕೆ ಹೀಗೆ ನೆನಪಿನಲ್ಲುಳಿದವು ಎಂಬುದನ್ನು ನಾನು ಉನ್ನತ ವ್ಯಾಸಂಗವನ್ನು ಮಾಡುವ ವೇಳೆಗೆ ವಿಶ್ಲೇಷಿಸಿದೆ. ಆ ಸಾಲುಗಳಲ್ಲಿರುವ ಲಯ, ಪ್ರಾಸ ಅನುಪ್ರಾಸ, ನಾದಯುಕ್ತವಾದ 'ನ' ಶಬ್ದದ ಪುನರಾವರ್ತನೆ ಹೀಗೆ. ಇಷ್ಟನ್ನಂತೂ ಹೇಳಬಹುದು. ನಮಗೆ ಅರ್ಥವಾಗದೇ, ಅವ್ಯಕ್ತವಾಗಿಯೇ ಆ ಸಾಲುಗಳು ನನ್ನಲ್ಲಿ ಭಾಷಾಪ್ರೇಮವನ್ನು ಉದ್ದೀಪನಗೊಳಿಸಿದ್ದವು. ಈ ಭಾಷಾಪ್ರೇಮವೇ ನಾನು ದೊಡ್ಡವನಾದಾಗ ಓದಲು ಕಠಿಣ

ಎನ್ನಲಾಗುವ ಅಡಿಗರ ಕವನದ ಸಾಲುಗಳನ್ನು ಮೊದಲ ಓದಿಗೇ ನೆನಪಿನಲ್ಲುಳಿಯುವಂತೆ ಮಾಡಿದುದು ಎನ್ನಿಸುತ್ತದೆ:

ಅಗೆವಾಗ್ಗೆ ಮೊದಲು ಕೋಶಾವಸ್ಥೆ ಮಣ್ಣು;

ಕೆಳಕ್ಕೆ, ತಳಕ್ಕೆ ಗುದ್ದಲಿಯೊತ್ತಿ ಕುಕ್ಕಿದರೆ

ಕಂಡೀತು ಗೆರೆಮಿರಿವ ಚಿನ್ನದದಿರು ("ಭೂತ", ಸಮಗ್ರ ಕಾವ್ಯ, ಪು. ೨೬೯)

ಗೊನೆ ಮಾಗಿ ಬಾಳೆ ಜೀವನ್ಮುಕ್ತ ಹಳಸುತಿದೆ

ಹಿಂಡು ಹಿಳ್ಳುಗಳಲ್ಲಿ ಪ್ರಾಣವೂರಿ. ("ಕೂಪ ಮಂಡೂಕ" ಸಮಗ್ರ ಕಾವ್ಯ, ಪು. ೩೦೧)

ಹುತ್ತಗಟ್ಟದೆ ಚಿತ್ತ ಮತ್ತೆ ಕೆತ್ತೀತೇನು

ಪುರುಷೋತ್ತಮನ ಆ ಅಂಥ ರೂಪ—ರೇಖೆ? (" ಶ್ರೀ ರಾಮನವಮಿಯ ದಿವಸ" ಸಮಗ್ರ ಕಾವ್ಯ, ಪು. ೩೦೬)

ಒಳ್ಳೆಯ ಸಾಹಿತ್ಯ ಅದು ಕಾವ್ಯ, ಕಾದಂಬರಿ, ನಾಟಕ ಮುಂತಾದ ಯಾವುದೇ ಪ್ರಕಾರದುದಾಗಲೀ, ಭಾಷೆಯನ್ನು ಅದರ ಉತ್ಕಟತೆಯಲ್ಲಿ, ಮಹೋನ್ನತ ಸೌಂದರ್ಯದಲ್ಲಿ ಬಳಸಿಕೊಳ್ಳುತ್ತದೆ. ಪರಿಣಾಮವಾಗಿ ಸಾಹಿತ್ಯವು ನಮ್ಮ ಮನಸ್ಸಿನಲ್ಲಿ ಭಾಷೆಯ ಬಗೆಗೆ ಪ್ರೀತಿಯನ್ನು ಉಂಟುಮಾಡುತ್ತದೆ. ಯಾವುದೇ ವಿಷಯದ ಸುಲಭಕಲಿಕೆಯ ಹಿಂದೆ ಅಗಾಧವಾದ ಭಾಷಾಪ್ರೇಮ ಕೆಲಸ ಮಾಡುತ್ತದೆ. ಭಾಷಾ ಪ್ರೇಮ ಕೇವಲ ಶಿಕ್ಷಣಕ್ಕಾಗಿ ಮಾತ್ರ ಇರುವುದಲ್ಲ, ಅದು ಸಂಸ್ಕೃತಿಯ ಬಗೆಗೆ, ಬದುಕಿನ ಬಗೆಗೆ ಬೆರಗು ಪ್ರೀತಿಗಳನ್ನು ಉಂಟು ಮಾಡಬಲ್ಲದು. ಇದರ ಬಗೆಗೆ ಮುಂದೆ ನೋಡೋಣ.

ಹೀಗೆಯೇ ಭಾಷೆಯ ಲಯ ನಮ್ಮಲ್ಲಿ ಭಾಷಾಪ್ರೇಮದೊಂದಿಗೆ ಪರಿಸರದ ಇತರ ಜೀವಿಗಳ ಬಗೆಗೂ ಒಂದು ಉಲ್ಲಾಸ ತುಂಬಿದ ಬೆರಗನ್ನು ಉಂಟು ಮಾಡಬಲ್ಲದು ಎಂಬುದಕ್ಕೆ ಬೇಂದ್ರೆ ಅವರ "ಪಾತರಗಿತ್ತಿ ಪಕ್ಕ" ಕವನದ ಈ ಸಾಲುಗಳನ್ನು ಉದಾಹರಣೆಯಾಗಿ ನೀಡಬಹುದು:

ಏನು ಬಣ್ಣ ಬಣ್ಣ

ನಡುವೆ ನವಿಲಗಣ್ಣ!

ರೇಶಿಮೆ ಪಕ್ಕ ನಯ

ಮುಟ್ಟಲಾರೆ ಭಯ! (ತಟ್ಟು ಚಪ್ಪಾಳೆ ಪುಟ್ಟ ಮಗು, ಪು ೨೬೯)

೨) ಭಾಷಾ ಸೂಕ್ಷ್ಮತೆ ಹಾಗೂ ಹೊಸ ಅರ್ಥಗಳ ಉದ್ದೀಪನ

ಯಾವುದೇ ವಿಷಯದ ಕಲಿಕೆಯಲ್ಲಿ ಹಾಗೂ ಜ್ಞಾನದ ಉತ್ಪಾದನೆಯಲ್ಲಿ ಅತ್ಯಂತ ಅಗತ್ಯದ ಸಂಗತಿಗಳಲ್ಲೊಂದು ಭಾಷಾ ಸೂಕ್ಷ್ಮತೆ ಹಾಗೂ ನಿಖರತೆ. ಸಾಹಿತ್ಯದ ಉತ್ತಮ ರಚನೆಗಳು ಭಾಷೆಯ ಸೂಕ್ಷ್ಮತೆಗೆ, ಸೂಕ್ಷ್ಮಪ್ರಯೋಗಕ್ಕೆ ಒತ್ತನ್ನು ನೀಡುತ್ತವೆ. ಸಾಹಿತ್ಯದಲ್ಲಿ ಭಾಷೆಯನ್ನು ಸಂದರ್ಭಕ್ಕೆ ಅನುಗುಣವಾಗಿ ಬಳಸಬೇಕಾದ ವಿಶೇಷವಾದ ಜರೂರು ಇರುತ್ತದೆ. ಒಬ್ಬ ಸಾಹಿತಿಗೆ ಇರಬೇಕಾದ ಮುಖ್ಯಗುಣಗಳಲ್ಲಿ ಒಂದು ಭಾಷಾಸೂಕ್ಷ್ಮತೆ ಮತ್ತು ನಿಖರತೆ. ಸಾಹಿತ್ಯದ ಓದು ಈ ಭಾಷಾಸೂಕ್ಷ್ಮತೆಯನ್ನು ಓದುಗನಿಗೆ, ಕಲಿಕೆಯ ಸಂದರ್ಭದಲ್ಲಿ ಶಿಕ್ಷಣಾರ್ಥಿಗಳಿಗೆ ನೀಡುತ್ತದೆ. ಹೀಗಾಗಿ ಯಾವುದೇ ವಿಷಯದ ನಿಖರ ಮತ್ತು ಸಮರ್ಥ ಗ್ರಹಿಕೆಗೆ, ವಿಚಾರಗಳ ಸಮರ್ಥ ಮತ್ತು ನಿರ್ದಿಷ್ಟವಾದ ಮಂಡನೆಗೆ ಬೇಕಾದ ಭಾಷಾಸೂಕ್ಷ್ಮತೆಯ ಸಿದ್ಧತೆ ಸಾಹಿತ್ಯದ ಅಧ್ಯಯನದಿಂದ ದೊರೆಯುತ್ತದೆ. ಒಂದು ಉದಾಹರಣೆಯ ಮೂಲಕ ಈ ವಿಚಾರವನ್ನು ವಿಷದಪಡಿಸುತ್ತೇನೆ. ನಾನು ಓದಿದ ಹ್ಯಾರಿಯಟ್ ಬೀಚರ್ ಸ್ಟೋ ಅವರ ಅಂಕಲ್ ಟಾಮ್ಸ್ ಕ್ಯಾಬಿನ್ ಕಾದಂಬರಿಯ ಒಂದು ವಾಕ್ಯ ಹೀಗಿದೆ: " ಊಾಜ ್ಪಜಚಿಡಿಜ ಣ್ಞಜ ಗಿಟಿಥಿಜ ಠಜಿ ಊಂಜ ಥಾಣ ಜುಜ ಟೆಂಣ ಟ್ಪಣಜಟಿ ಣಾ ್ಣ." ಈ ವಾಕ್ಯ ಆ ಕಾದಂಬರಿಯ ಖಳನಾಯಕ, ಗುಲಾಮರ ಪೀಡಕನಾದ ಸೈಮನ್ ಲಿಗ್ರೀ (ಖುಟಂಟಿ

ಖಜಂಡಿಜಜ) ಯ ಬಗೆಗೆ ಇರುವುದು. ಇಲ್ಲಿ "ುಜಚಿಡಿ" ಮತ್ತು "ಟುಣಜಟಿ" ಈ ಕ್ರಿಯಾಪದಗಳ ನಡುವೆ ಇರುವ ವ್ಯತ್ಯಾಸ ಮನವರಿಕೆ ಆಗುವುದು ಮಾತ್ರವಲ್ಲದೆ ಒಂದು ಮಾನವೀಯ, ತಾತ್ವಿಕ ಹಾಗೂ ಆಧ್ಯಾತ್ಮಿಕ ಸನ್ನಿವೇಶದ ಸೂಕ್ಷ್ಮ ಅಭಿವ್ಯಕ್ತಿ ಇದೆ.

ಪದಗಳ ಅರ್ಥವ್ಯತ್ಯಾಸ ಮಾತ್ರವಲ್ಲ, ವ್ಯಾಕರಣದ ಸಮರ್ಥ ಕಲಿಕೆಯೂ ಕಾವ್ಯದ ಮೂಲಕ ಸುಲಭಸಾಧ್ಯವಾಗಬಹುದು. ಭೂತ, ವರ್ತಮಾನ, ಭವಿಷ್ಯತ್ ಕಾಲಗಳನ್ನು ಸೂಚಿಸುವ ಈ ವರ್ಡ್ಸ್‌ವರ್ತ್‌ನ ಕವನವನ್ನು ನೋಡೋಣ:

ಒಥಿ ುಜಚಿಡಿಣ ಟಜಚಿಠಿ ಣರಿ ತಿುಜಟಿ ಖ ಛಜುಠಟಜ
ಂ ಡಿಚಿಟಿಛಠತಿ ಟಿ ಣುಜ, ಙಥಿ:
ಖಠ ತಿಚಿ ಟಣ ತಿುಜಟಿ ಟಥಿ ಟುಜಿಜ ಛಜಂಚಿಟಿ;
ಖಠ ು ಟಣ ಟಿಠತಿ ಖ ಚಿಟ ಚಿ ಟಚಿಟಿ;
ಖಠ ಛಜ ಟಣ ತಿುಜಟಿ ಖು ುಚಿಟಟ ಠಡಿಠತಿ ಠಟಜ,
ಔಡಿ ಟಜಣ ಟಜ ಜುಜ!
ಖಿುಜ ಛಿುಟಜ ು ಜಿಚಿಣುಜಡಿ ಠಜಿ ಣುಜ ಒಚಿಟಿ;
ಂಟಿಜ ಖ ಛಿಠಣಟಜ ತಿು ಟಥಿ ಜಚಿಥಿ ಣಠ ಛಜ
ಃಠಣಟಿಜ ಜಚಿಛಿು ಣಠ ಜಚಿಛಿು ಛಥಿ ಟಿಚಿಣಡಿಚಿಟ ರಿುಜಣಥಿ.

ಈ ಕವನವೂ ಮರೆಯಲು ಅಸಾಧ್ಯ ಎನ್ನಬಹುದಾದ ಕವನ. ಇದು ಕಾಲದ ಸೂಚನೆಯೊಂದಿಗೆ, ನಿರಂತರವಾಗಿ ಇರುವ, ಇರಬೇಕಾದ ಮಾನವ- ಪ್ರಕೃತಿಯ ಸಂಬಂಧವನ್ನು ಸೂಚಿಸುತ್ತದೆ. ಮನುಷ್ಯ ಪ್ರಕೃತಿಯ ಒಂದು ಅಂಗವೇ. ಹಾಗಾಗಿ ಪ್ರಕೃತಿಯ ವಿದ್ಯಮಾನವಾದ ಕಾಮನಬಿಲ್ಲನ್ನು ನೋಡಿದಾಗ ಅವನ ಮನಸ್ಸು ಬಾಲ್ಯದಲ್ಲಿ ಮಹೋಲ್ಲಾಸಗೊಳ್ಳುತ್ತಿತ್ತು. ಈಗಲೂ ಹಾಗೆಯೇ ಉಲ್ಲಾಸಗೊಳ್ಳುತ್ತದೆ. ತಾನು ವೃದ್ಧನಾದಾಗಲೂ ಹಾಗೆಯೇ ಇರಬೇಕು, ಇಲ್ಲದಿದ್ದರೆ ತಾನು ಸಾಯಬೇಕು ಎನ್ನುತ್ತಾರೆ ಕವಿ.

ಎಂದು ನಮ್ಮ ಮನಸ್ಸು ಚಿಟ್ಟೆಗಳ ಹಾರಾಟವನ್ನು ನೋಡಿ, ಹಕ್ಕಿಯ ಉಲಿಯನ್ನು ಕೇಳಿ, ಹಸುರಿನ ಚಿಗುರನ್ನು ಕಂಡು ಮುದಗೊಳ್ಳುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತದೋ ಅಂದು ನಮ್ಮ ಬದುಕು ಅರ್ಥಹೀನವಾಗುತ್ತದೆ. ಆಗ ನಾವು ಬದುಕಿದರೂ ಅದು ಸತ್ತಿರುವ ಸ್ಥಿತಿಯೇ.

ಅಂದರೆ ಇಲ್ಲಿ ಭಾಷೆಯ ಕಲಿಕೆಯೊಂದಿಗೆ ಅದನ್ನು ಮೀರಿದ ಪ್ರಕೃತಿಪ್ರಜ್ಞೆ, ಸೌಂದರ್ಯೋಪಾಸನೆಯ ಶಕ್ತಿಗಳ ಉದ್ದೀಪನೆಯೊಂದಿಗೆ ಬದುಕಿನ ಅರ್ಥದ ಬಗೆಗೆ ಒಂದು ತಾತ್ವಿಕ ನಿಲುವೂ ಅರಿವಿಗೆ ಬರುತ್ತದೆ. ಅಂದರೆ ಸಾಹಿತ್ಯದ ಮೂಲಕ ಭಾಷೆಯ ಕಲಿಕೆಯ ಪ್ರಯತ್ನ ನಮ್ಮನ್ನು ಬೆರಗು ಮೂಡಿಸುವ ಆಯಾಮಗಳತ್ತ ಒಯ್ಯುತ್ತದೆ. ಇಂತಹ ಸಾಧ್ಯತೆ ರೈಲುನಿಲ್ದಾಣದಲ್ಲಿ ಟಿಕೆಟ್ ಖರೀದಿಸುವಾಗ ಬಳಸುವ ಅಥವಾ ಅಂತಹುದೇ ಆದ ಇತರ ಸಂಭಾಷಣೆಗಳಲ್ಲಿ ಸಿಗುವುದಿಲ್ಲ.

ಇಂಗ್ಲಿಷ್ ರೊಮ್ಯಾಂಟಿಕ್ ಕಾವ್ಯದ ಘನೋದ್ದೇಶಗಳಿಂದ ಪ್ರಭಾವಿತವಾದ ಪ್ರಕೃತಿಯ ಕವಿ ಕುವೆಂಪು ಅವರ ಪಕ್ಷಿಕಾಶಿ ಸಂಕಲನದಲ್ಲಿ ದೊರೆಯುವ “ಹಸುರು” ಎಂಬ ಕವನದ ಕೆಲವು ಸಾಲುಗಳು ಹೀಗಿವೆ.

ಹಸುರಾಗಸ; ಹಸುರು ಮುಗಿಲು;

ಹಸುರು ಗದ್ದೆಯಾ ಬಯಲು;

ಹಸುರಿನ ಮಲೆ; ಹಸುರು ಕಣಿವೆ;

ಹಸುರು ಸಂಜೆಯೀ ಬಿಸಿಲೂ!

ಈ ಸಾಲುಗಳು ವಿದ್ಯಾರ್ಥಿಗಳಲ್ಲಿರುವ ಹಸಿರು ಪ್ರೇಮಕ್ಕೆ ಒಂದು ಕಾವ್ಯಾತ್ಮಕ ಪ್ರತೀಕವನ್ನು ನೀಡುತ್ತವೆ. ಎಲ್ಲೆಲ್ಲೂ ಕಾಣುವ ಹಸಿರು ಸಂಜೆಯ ಬಿಸಿಲಿನಲ್ಲೂ ಹಸಿರನ್ನ ಕಾಣುವ, ಹಸಿರಿನ ಪರಿಣಾಮದ ಅನುಭವವನ್ನು ಪಡೆವ ಒಂದು ಶಕ್ತಿಗೆ ಮನಸ್ಸನ್ನು ತೆರೆಯುತ್ತದೆ. ಸುಲಭಗ್ರಾಹ್ಯವಾದ ಈ ಸಾಲುಗಳು ಮನಸ್ಸಿನಲ್ಲಿ ಉಳಿದು ಹಸಿರಿನ ಮೌಲ್ಯದ

ಬಗೆಗೆ ನಿರಂತರ ಅರಿವನ್ನೂ, ಪರಿಸರದ ಕಾಳಜಿಗೆ ಮನಸ್ಸಿನಲ್ಲಿ ಒಂದು ಭದ್ರ ನೆಲೆಗಟ್ಟನ್ನೂ ಸೃಜಿಸಲು ಸಮರ್ಥವಾಗಬಲ್ಲವು.

ಭಾಷಾಕಲಿಕೆಯಲ್ಲಿ ಸಹಕಾರಿಯಾಗುವ ಸಾಹಿತ್ಯದ ಇತರ ಪ್ರಕಾರಗಳ ಬಗೆಗೆ ಸೂಕ್ಷ್ಮವಾಗಿ ಹೇಳುವುದಾದರೆ ನಾಟಕಗಳು ಭಾಷೆಯ ಸೂಕ್ತ ಮತ್ತು ಪರಿಣಾಮಕಾರೀ ಬಳಕೆಗೆ ಮಾದರಿಗಳನ್ನು ನೀಡುತ್ತವೆ. ಮಕ್ಕಳಲ್ಲಿ ಅಭಿನಯದ ಮೂಲಕ ಕಲಿಕೆಯನ್ನು ಪ್ರಚೋದಿಸಲು ನಾಟಕದ ತಂತ್ರವನ್ನು, ಸಂಭಾಷಣಾ ವಿಧಾನವನ್ನು ಬಳಸುವುದು ಸಾಮಾನ್ಯವಾಗಿ ಬಳಕೆಯಲ್ಲಿ ಈಗಾಗಲೇ ಇರುತ್ತದೆ ಎಂದುಕೊಂಡಿದ್ದೇನೆ. (ಈಗ ಇರುವ ಐದನೆಯ ತರಗತಿಯ ಕನ್ನಡ ಪಠ್ಯಪುಸ್ತಕದಲ್ಲಿ ರವೀಂದ್ರನಾಥ ಟಾಗೋರರು ರಚಿಸಿದ, ಬಿ, ವಿ. ಕಾರಂತರು ಅನುವಾದಿಸಿರುವ ಪಂಜರಶಾಲೆ ಎಂಬ ನಾಟಕವನ್ನು ಸೇರಿಸಿರುವುದನ್ನು ನಾನು ಗಮನಿಸಿದ್ದೇನೆ.) ಶಾಲಾ ಪಠ್ಯಪುಸ್ತಕಗಳಲ್ಲಿ ಸಾಹಿತ್ಯದ ಮೂಲಕ ಶಿಕ್ಷಣದ ವಿಧಾನದಲ್ಲಿ ನಾಟಕದ ಮಾಧ್ಯಮವನ್ನು ಇನ್ನೂ ಹೆಚ್ಚು ವ್ಯವಸ್ಥಿತವಾಗಿ ಬಳಸಿಕೊಳ್ಳಬಹುದಾದ ಸಾಧ್ಯತೆ ಇರುತ್ತದೆ.

೩) ವಿಚಾರಗಳ ತಾರ್ಕಿಕ ಬೆಳವಣಿಗೆ ಹಾಗೂ ಮಂಡನೆಯ ಸಾಮರ್ಥ್ಯ

ಸಣ್ಣ ಕಥೆ, ಕಿರು ಕಾದಂಬರಿ ಹಾಗೂ ಕಾದಂಬರಿಗಳು ಕಥಾನಕಗಳ ಉಪ-ಪ್ರಕಾರಗಳು. ಅವುಗಳ ರಚನೆ, ಕಲ್ಪನೆ ಹಾಗೂ ಬಂಧದಿಂದಾಗಿ ನೆನಪಿನಲ್ಲಿ ಉಳಿಯುತ್ತವೆ. ಅಲ್ಲದೇ ಕಥಾನಕಗಳ ಬೆಳವಣಿಗೆಯ ಕ್ರಮವು ಒಂದು ವಿಚಾರಸರಣಿಯನ್ನು ಮನಸ್ಸಿನಲ್ಲಿ ಬೆಳೆಸಲು ಮಾದರಿಗಳನ್ನು ಸೃಷ್ಟಿಸುತ್ತಾ ತಾರ್ಕಿಕ ವಿಚಾರಮಂಡನೆಯ ಬೆಳವಣಿಗೆಗೆ ತರಪೇತಿಯನ್ನು ನೀಡುತ್ತವೆ. ಮಕ್ಕಳ ಕಥೆಗಳಿಂದ ಹಿಡಿದು ಪ್ರೌಢ ಸಾಹಿತ್ಯ ಕೃತಿಗಳ ಆರಂಭ, ಬೆಳವಣಿಗೆ, ಅಂತ್ಯ ಈ ವಿನ್ಯಾಸವು ಒಂದು ರಚನಾತ್ಮಕ ಮಾದರಿಯನ್ನು ನಮ್ಮ ಮನಸ್ಸಿನಲ್ಲಿ ಮೂಡಿಸುತ್ತದೆ. ಅನೇಕ ಪ್ರಖ್ಯಾತ ಸಾಹಿತಿಗಳು ಸಂದರ್ಶನಗಳಲ್ಲಿ ಹಾಗೂ ತಮ್ಮ ಸೃಜನಶೀಲ ಬೆಳವಣಿಗೆಯ ವಿಶ್ಲೇಷಣೆಗಳಲ್ಲಿ ತಾವು ಬಾಲ್ಯದಲ್ಲಿ ಕಥೆಗಳನ್ನು, ಕಾವ್ಯವಾಚನವನ್ನು ಕೇಳುತ್ತಿದ್ದುದು ತಮ್ಮ ಬರವಣಿಗೆಯ ಸಾಮರ್ಥ್ಯಕ್ಕೆ ಹೇಗೆ ಪುಷ್ಟಿ ನೀಡಿತು ಎಂದು ದಾಖಲಿಸುತ್ತಾರೆ.

ಕಥೆ, ಕಾದಂಬರಿಗಳು ಸೃಜನಶೀಲತೆಯ ಜೊತೆಯಲ್ಲಿ ನಮ್ಮ ಮನಸ್ಸು ಕಥಾನಕಗಳ ಲೋಕವನ್ನು ಪ್ರವೇಶಿಸಿ ಕಲ್ಪನಾಲೋಕದಲ್ಲಿ ವಿಹರಿಸುವ ಆನಂದವನ್ನೂ ಇತರ ಪಾತ್ರಗಳ

ಒಳಹೊಕ್ಕು ಅರಿಯುವಂತೆ ಮಾಡುವ ಅನುಭೂತಿಯನ್ನೂ ನೀಡುತ್ತವೆ. ಇದೇ ಅನುಭವ ನಮ್ಮ ಮನಸ್ಸಿನ ಕಲ್ಪನಾಶಕ್ತಿಯ ಹಾಗೂ ವಿಚಾರಶಕ್ತಿಯ ಎಲ್ಲೆಯನ್ನೂ ವಿಸ್ತರಿಸುತ್ತದೆ. ಪ್ರಬಂಧವು ಸಾಹಿತ್ಯದ ಇನ್ನೊಂದು ಮುಖ್ಯ ಪ್ರಕಾರ. ಒಂದು ಸಾಮಾನ್ಯ ವಿಷಯವನ್ನು ತೆಗೆದುಕೊಂಡು ಅದನ್ನು ಸ್ವಾರಸ್ಯಕರವಾಗಿ ಮಂಡಿಸುವ ಕಲೆ ಪ್ರಬಂಧದ ಅಂತಃಸತ್ವ. ಪ್ರಬಂಧಗಳ ಓದು ಸ್ವಾರಸ್ಯಕರ ವಿಷಯಮಂಡನೆಯ ಕಲೆಯನ್ನು ವಿದ್ಯಾರ್ಥಿಗಳಿಗೆ ಕಲಿಸಬಲ್ಲದು. ಪ್ರಬಂಧಗಳು ಮತ್ತು ವಿಚಾರಸಾಹಿತ್ಯ ನಮ್ಮ ತಾರ್ಕಿಕ ಸಾಮರ್ಥ್ಯವನ್ನೂ ಬದುಕಿನ ಅರಿವನ್ನೂ ವಿಸ್ತರಿಸುತ್ತವೆ. ಸಾಹಿತ್ಯದ ಇಂತಹ ಅಪರಿಮಿತ ಶಕ್ತಿಗಳನ್ನು ಸರಳೀಕರಿಸಿ ಹೇಳುವುದು, ಪಟ್ಟಿ ಮಾಡುವುದು ಒಂದು ಕ್ಲಿಷ್ಟ ಮತ್ತು ಪ್ರಯಾಸಕರ ಕೆಲಸವಾಗಿದೆ.

೪) ಸಾಂಸ್ಕೃತಿಕ ಅರಿವು

ಭಾಷೆ ಎನ್ನುವುದು ಸಂಸ್ಕೃತಿಯ ಒಂದು ಅಭಿವ್ಯಕ್ತಿ. ಸಾಹಿತ್ಯ ಒಂದು ಪ್ರಮುಖ ಸಾಂಸ್ಕೃತಿಕ ಆಚರಣೆ (ಛಿೞಟಣಿೞಡಿಚಿಟ ರಿಡಿಚಿಛಿ). ಆದ್ದರಿಂದ ಸಾಹಿತ್ಯದ ಮೂಲಕ ಕಲಿಯುವ ಭಾಷೆ ಒಬ್ಬ ವ್ಯಕ್ತಿಯನ್ನು ಆ ಸಂಸ್ಕೃತಿಯ ಹಲವು ಆಯಾಮಗಳಿಗೆ ಪರಿಚಯಿಸುತ್ತದೆ. ಒಂದು ಸಂಸ್ಕೃತಿಯ ಮೌಲ್ಯಗಳ ಅರಿವು ಯಾವುದೇ ವಿಷಯದ ಕಲಿಕೆಯಲ್ಲಿ ಒಂದು ಅಗತ್ಯವಾದ ಹಿನ್ನೆಲೆಯಾಗುತ್ತದೆ.

ಸಾಹಿತ್ಯಕೃತಿಗಳು ಜನರ ಬದುಕಿನ ಚಿತ್ರಣವನ್ನು ನೀಡುವ ಮೂಲಕ ಜನಸಮುದಾಯದ ಸಂಸ್ಕೃತಿಯ ಒಂದು ಆತ್ಮೀಯ ಪರಿಚಯ ಮಾಡಿಕೊಡುತ್ತವೆ. ಉದಾಹರಣೆಗೆ ಶಿವಮೊಗ್ಗ ಜಿಲ್ಲೆಯ ಮಲೆನಾಡಿನ ಸಂಸ್ಕೃತಿಯ ಅರಿವನ್ನು ಕುವೆಂಪು ಅವರ ಕಾದಂಬರಿಗಳಿಂದ, ಮುಸ್ಲಿಂ ಸಂಸ್ಕೃತಿಯ ಹಲವು ವಿಚಾರಗಳನ್ನು ಮುಸ್ಲಿಂ ಬರಹಗಾರರ ಸಾಹಿತ್ಯದಿಂದ, ದಲಿತರ ಬದುಕಿನ, ಸಂಸ್ಕೃತಿಯ ಪರಿಚಯವನ್ನು ದೇವನೂರ ಮಹಾದೇವ ಮುಂತಾದ ಲೇಖಕರ ಕಥೆ ಕಾದಂಬರಿಗಳಿಂದ ನಾವು ಪಡೆಯಬಹುದು. ಚಿನುವಾ ಅಚಿಬೆ ಎಂಬ ಆಫ್ರಿಕನ್ ಲೇಖಕರ ಥಿಂಗ್ಸ್ ಫಾಲ್ ಅಪಾರ್ಟ್ ಕಾದಂಬರಿಯನ್ನು ಓದಿದರೆ (ಈ ಕಾದಂಬರಿ ಪ್ರೊ, ಸಿ, ನಾಗಣ್ಣ ಅವರಿಂದ ಭಂಗ ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಗೊಂಡಿದೆ.) ನೈಜೀರಿಯಾದ ಇಬೊ ಬುಡಕಟ್ಟು ಜನರ ಸಾಂಸ್ಕೃತಿಕ ಬದುಕು ನಮ್ಮ ಕಣ್ಣಿಗೆ ಕಟ್ಟುತ್ತದೆ.

ಶಿಕ್ಷಣದಲ್ಲಿ ಈ ಸಾಂಸ್ಕೃತಿಕ ಅರಿವಿನ ಬೆಳವಣಿಗೆಗೆ ಒಂದು ಅಗತ್ಯ ಸ್ಥಾನವಿದೆ. ಮಕ್ಕಳು ತಮ್ಮ ತಮ್ಮ ಕೌಟುಂಬಿಕ ಸಾಂಸ್ಕೃತಿಕ ಪರಿಸರದಲ್ಲಿ ಬೆಳೆಯುತ್ತಾರೆ. ಅನಿವಾರ್ಯವಾಗಿ ಅವರು ಕುಟುಂಬದ ಆಚೆಯ ಜಗತ್ತಿಗೆ ಕಾಲಿಡುತ್ತಾರೆ. ಆದ್ದರಿಂದ ಮಕ್ಕಳಲ್ಲಿ ಇತರ ಸಂಸ್ಕೃತಿಗಳನ್ನು ಸಹಾನುಭೂತಿಯಿಂದ ಅರಿಯುವ, ಗೌರವಿಸುವ ಪ್ರಜ್ಞೆಯನ್ನು ಬೆಳೆಸಬೇಕಾದ ಅಗತ್ಯವಿದೆ. ಇಂತಹ ಪ್ರಜ್ಞೆಯು ಪರಸ್ಪರ ಹೊಂದಾಣಿಕೆಗೆ ಸಹಬಾಳ್ವೆಗೆ ಅಗತ್ಯ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ೨೦೦೫ರಲ್ಲಿ ಹೇಳಿರುವ ಒಂದು ವಿಚಾರವೆಂದರೆ, "ಒಂದು ಬಹುಸಾಂಸ್ಕೃತಿಕ ಸಮಾಜದಲ್ಲಿ ಶಾಂತಿ, ಮಾನವತೆ ಮತ್ತು ಸಹಿಷ್ಣುತೆಯ ಮೌಲ್ಯಗಳನ್ನು ಬೆಳೆಸಲು ಶಿಕ್ಷಣವು ಸಮರ್ಥವಾಗಬೇಕು"(ಪು.೨) ಎಂಬುದು.

ಸಂಸ್ಕೃತಿ ಎನ್ನುವುದು ಸಾಂಕೇತಿಕ ಆಚರಣೆ. ಸಾಂಕೇತಿಕ ಆಚರಣೆ ಮಾನವಜೀವಿಯ ಒಂದು ವಿಶಿಷ್ಟ ನಡವಳಿಕೆ. ಕೆಲವೊಮ್ಮೆ ಆಧುನಿಕ ಬದುಕಿನ ಆಶಯಗಳಿಗೆ ವಿರೋಧಿಯಾದ, ಜೀವನ ವಿರೋಧಿಯಾದ ಆಚರಣೆಗಳೂ ಒಂದು ಸಂಸ್ಕೃತಿಯಲ್ಲಿ ಉಳಿದುಕೊಂಡು ಬಂದಿರುವುದೂ ಸಾಧ್ಯ. ಅಂತಹ ಸಂಗತಿಗಳ ಬಗೆಗಿನ ಒಂದು ವಿಮರ್ಶಾತ್ಮಕ ಅರಿವೂ ಸಹ ಸಾಂಸ್ಕೃತಿಕ ಅರಿವಿನ ಭಾಗವೇ ಆಗಿರುತ್ತದೆ. ಸಾಹಿತ್ಯವು ಇಂತಹ ವಿಮರ್ಶಾತ್ಮಕ ಪ್ರಜ್ಞೆಯನ್ನೂ ಬೆಳೆಸಬಲ್ಲದು. ಆದರೆ ಬದುಕಿನ ಸೌಂದರ್ಯವನ್ನು ಹೆಚ್ಚಿಸುವ ಆಚರಣೆಗಳ ಬಗೆಗೆ ಒಲವನ್ನೂ, ಜೀವನ ವಿರೋಧಿಯಾದ ಆಚರಣೆಗಳ ಬಗೆಗೆ ದ್ವೇಷರಹಿತ ವಿಮರ್ಶಾಪ್ರಜ್ಞೆಯನ್ನೂ ಬೆಳೆಸಿಕೊಳ್ಳುವುದು ಅಗತ್ಯ. ಇದು ಒಂದು ಸೂಕ್ಷ್ಮವಾದ ಮತ್ತು ಜವಾಬ್ದಾರಿಯ ಕ್ರಿಯೆ. ಇದು ಸಾಹಿತ್ಯದ ಮೂಲಕ ಸಾಧ್ಯವಾಗಬಹುದಾದ ಕ್ರಿಯೆ.

ಒಟ್ಟಿನಲ್ಲಿ ಹೇಳುವುದಾದರೆ, ಇಂದಿನ ಶಿಕ್ಷಣವ್ಯವಸ್ಥೆಯ ಒಂದು ಮಿತಿ ಎಂದರೆ ಹಲವಾರು ವಿಷಯಗಳ ಅಧ್ಯಯನದಲ್ಲಿ ಸಾಂಸ್ಕೃತಿಕ ವಿಚಾರಗಳು ಕಡೆಗಣಿಸಲ್ಪಡುವುದು. ಸಾಂಸ್ಕೃತಿಕ ಬಹುತ್ವ ಇಂದಿನ ಜಾಗತಿಕ ಸಂದರ್ಭವಾಗಿದೆ. ವಿವಿಧ ಸಂಸ್ಕೃತಿಗಳ ಸಾಹಿತ್ಯದ ಕೃತಿಗಳ ಅಧ್ಯಯನ ಸಾಂಸ್ಕೃತಿಕ ಬಹುತ್ವದ ಅರಿವನ್ನು ಮೂಡಿಸಲು ಸಹಕಾರಿ. ವಿವಿಧ ಸಂಸ್ಕೃತಿಗಳ ನಡುವಿನ ಮುಖಾಮುಖಿಯು ಸಹಕಾರ, ಸಹಬಾಳ್ವೆಗಳ ಜೀವನಪರ ನೆಲೆಯಲ್ಲಿ ನಡೆಯುವಂತೆ ಮಾಡಲು ಇಂತಹ ಅರಿವು ಅಗತ್ಯ. ಈ ಸಂಗತಿಗೂ ಭಾಷೆಯ ಕಲಿಕೆಗೂ ಇರುವ ಸಂಬಂಧ ಎಂದರೆ, ಯಾವುದೇ ಭಾಷೆಯು ಒಂದು ಸಾಂಸ್ಕೃತಿಕ ಅಭಿವ್ಯಕ್ತಿಯಷ್ಟೇ ಅಲ್ಲದೆ ಅದೊಂದು ಸಾಂಸ್ಕೃತಿಕ ವಾಹಕ ಎನ್ನುವುದರಲ್ಲಿದೆ.

೫) ಮೌಲ್ಯಪ್ರಜ್ಞೆ

ನನಗೆ ಅನ್ನಿಸುವಂತೆ ಈಗಿನ ಶಿಕ್ಷಣವು ಎದುರಿಸುತ್ತಿರುವ ಬಹು ದೊಡ್ಡ ಸವಾಲು ಎಂದರೆ ಶಿಕ್ಷಣದ ಗುರಿಯ ಬಗೆಗಿನ ಅರಿವಿನ ಕೊರತೆ. ಒಬ್ಬ ವಿದ್ಯಾರ್ಥಿಗೆ ಜೀವನಮಾರ್ಗವನ್ನು ಕಲ್ಪಿಸುವ ಒಂದು ಶಕ್ತಿಯಾಗಿ ಶಿಕ್ಷಣವನ್ನು ನೋಡಲಾಗುತ್ತದೆಯಾದರೂ ಆ ಜೀವನಮಾರ್ಗದ ಪರಿಕಲ್ಪನೆ ಹೆಚ್ಚೆಂದರೆ ಆರ್ಥಿಕ ಸಾಮಥ್ರ್ಯದ ಪ್ರಶ್ನೆಯಾಗಿರುತ್ತದೆ. ಇಂದು ಮನುಕುಲದ ಮುಂದಿರುವ ಅತಿ ದೊಡ್ಡ ಕೊರತೆ ಎಂದರೆ ಬದುಕಿನ ಉದ್ದೇಶದ ಬಗೆಗೆ, ಮೌಲ್ಯಗಳ ಬಗೆಗೆ ಅರಿವಿನ ಕೊರತೆ. ಜೀವನಮೌಲ್ಯಗಳ ಅರಿವಿನ ಕೊರತೆಯಿಂದಾಗಿ ಇಂದು ಹಣ ಸಂಪಾದನೆಯೇ ಬದುಕಿನ ಅತ್ಯಂತ ದೊಡ್ಡ ಗುರಿ ಎನಿಸಿದೆ. ಶಾಲಾಶಿಕ್ಷಣದಲ್ಲಿ ನೀತಿಶಿಕ್ಷಣವನ್ನು ಒಂದು ಅಗತ್ಯವಾದ ಅಂಗವಾಗಿ ಇಂದು ಪರಿಗಣಿಸುತ್ತಿಲ್ಲ. ಇಂತಹ ಶೂನ್ಯದಲ್ಲಿ ಸಾಹಿತ್ಯವು ಮೌಲ್ಯಪ್ರಜ್ಞೆಯ ಒಂದು ಆಕರವಾಗಬಲ್ಲದು, ಸಂಪನ್ಮೂಲವಾಗಬಲ್ಲದು.

ಜೀವನ ಮೌಲ್ಯಗಳು ಎಂದಾಗ, ವೈಯಕ್ತಿಕವಾಗಿ ಹಾಗೂ ಸಾಮಾಜಿಕವಾಗಿ ನಮ್ಮ ಬದುಕನ್ನು ಹಸನಾಗಿಸುವ, ಅರ್ಥಪೂರ್ಣವಾಗಿಸುವ ಎಲ್ಲಾ ಸಂಗತಿಗಳು. ನಮ್ಮ ಬದುಕು ಇತರರ ಬದುಕಿನಲ್ಲಿ ಹಾಸುಹೊಕ್ಕಾಗಿರುವುದರಿಂದ ನಾವು ನಮ್ಮ ಮೌಲ್ಯಗಳನ್ನು ಇತರರ ಬದುಕಿಗೆ ವಿಮುಖವಾದ ಪ್ರತ್ಯೇಕತೆಯಲ್ಲಿ ರೂಢಿಸಿಕೊಳ್ಳಲು ಸಾಧ್ಯವಿಲ್ಲ. ನಾವು ಬದುಕಿರಲು, ನಮ್ಮ ಬದುಕನ್ನು ಸುಗಮವಾಗಿಸಲು ಹಣವೂ ಒಂದು ಅಗತ್ಯ. ಆದರೆ ಹಣವೇ ನಮ್ಮ ಬದುಕಿಗೆ ಒಂದು ಅರ್ಥವಂತಿಕೆಯನ್ನು ತಂದುಕೊಡುವುದಿಲ್ಲ. ತನ್ನ ಇಡೀ ಬದುಕನ್ನು ಹಣ ಗಳಿಕೆಗೆ ಮುಡಿಪಾಗಿಡುವ ವ್ಯಕ್ತಿ ಬದುಕನ್ನು ಶ್ರೀಮಂತಗೊಳಿಸುವ ಅನೇಕ ಸಂಗತಿಗಳಿಂದ, ಕಲೆ, ಸಾಹಿತ್ಯ, ಕ್ರೀಡೆ, ಸಂಗೀತ, ಪ್ರಕೃತಿಪ್ರೇಮ ಇವುಗಳಿಂದ, ಸಾಮಾಜಿಕ ಬದುಕಿನ ಇತರ ಆಯಾಮಗಳಿಂದ ವಂಚಿತನಾಗಬಹುದು. ನಮ್ಮ ಬದುಕನ್ನು ಶ್ರೀಮಂತಗೊಳಿಸುವ ಮೌಲ್ಯಗಳನ್ನು ಅರಿಯುವ ದಿಕ್ಕಿನಲ್ಲಿ ಸಾಹಿತ್ಯದ ಓದು ಉಪಯುಕ್ತವಾಗುತ್ತದೆ.

ಬದುಕಿನಲ್ಲಿ ಜೀವನಮೌಲ್ಯಗಳ ಸ್ಥಾನದ ಬಗೆಗೆ ಒಂದು ಪ್ರಾಥಮಿಕ ಹಂತದ ತಾತ್ವಿಕ ಜಿಜ್ಞಾಸೆ ಅಪೇಕ್ಷಣೀಯ. ಎಲ್ಲಾ ಸಮಾಜಗಳಲ್ಲಿ, ಧರ್ಮಗಳಲ್ಲಿ ಒಂದು ನೆಲೆಯ ಮೌಲ್ಯಜಿಜ್ಞಾಸೆ ಇರುತ್ತದೆ. ಭಾರತೀಯ ಪರಂಪರೆಯಲ್ಲಿ ಅಂತಹ ಜಿಜ್ಞಾಸೆಗೆ ಪ್ರಮುಖ ಸ್ಥಾನವಿದೆ. ಕ್ರಿಸ್ತಶಕೆಯ ಆರಂಭದ ಕಾಲದಲ್ಲಿಯೇ ಪ್ರಚಲಿತವಿತ್ತು ಎನ್ನಲಾಗುವ

ವಿಷ್ಣುಶರ್ಮನ   (ಅಥವಾ ವಸುಭಾಗನ) ಪಂಚತಂತ್ರ ಕೃತಿಯೇ ಇದಕ್ಕೊಂದು ಒಳ್ಳೆಯ ಉದಾಹರಣೆಯಾಗಬಲ್ಲದು.

ನಾನು ಅನುಕೂಲಕ್ಕಾಗಿ ಜರ್ಮನ್ ತತ್ವಶಾಸ್ತ್ರಜ್ಞ ಇಮ್ಮಾನ್ಯುಯಲ್ ಕಾಂಟ್(೧೭೨೪–೧೮೦೪) ಅವರ ಒಂದು ತತ್ವದ ಕುರಿತು ಹೇಳಲಿಚ್ಚಿಸುತ್ತೇನೆ. ಅದೆಂದರೆ ಬದುಕಿನಲ್ಲಿ ನೈತಿಕ ಮೌಲ್ಯಗಳ ಮಹತ್ವವನ್ನು ಮನಗಾಣಿಸುವ ಪರಿಕಲ್ಪನೆಯಾದ ಕೆಟಗಾರಿಕಲ್ ಇಂಪರೆಟಿವ್(ಅಚಿಣಜಂಂಡುಛಿಚಿಟ ಖಟಿರಿಜಡಿಚಿಣುತಜ) ಅಥವಾ ಪ್ರಶ್ನಾತೀತ ಆಜ್ಞಾರ್ಥಕ. ಕಾಂಟ್ ಹೇಳುವುದಿಷ್ಟು. ಯಾರೂ ಯಾವುದೇ ನೈತಿಕ ಮೌಲ್ಯವನ್ನು ಅನುಸರಿಸದಿದ್ದರೆ ಮಾನವ ಸಮಾಜದ ಅಸ್ತಿತ್ವವೇ ಅಸಾಧ್ಯ. ಉದಾಹರಣೆಗೆ ಕಳ್ಳತನ ಮಾಡಬಾರದು ಎಂಬ ವಿಚಾರವನ್ನು ತೆಗೆದುಕೊಳ್ಳೋಣ. ಇದನ್ನು ಯಾರೂ ಅನುಸರಿಸದಿದ್ದರೆ, ಎಲ್ಲರೂ ಕಳ್ಳತನದಿಂದಲೇ ಬದುಕುವುದಾದರೆ ಆಗ ಯಾರೂ ವಸ್ತುಗಳನ್ನಾಗಲೀ, ಆಹಾರವನ್ನಾಗಲೀ ಉತ್ಪಾದಿಸುವುದಿಲ್ಲ. ಆಗ ಬದುಕೇ ಸಾಧ್ಯವಿಲ್ಲ. ಒಂದು ವೇಳೆ ಉತ್ಪಾದಿತ ವಸ್ತುವಿದೆ ಅಂದುಕೊಂಡರೆ ಎಲ್ಲರೂ ಕಳ್ಳತನವನ್ನೇ ಬದುಕಿನ ಮಾರ್ಗವನ್ನಾಗಿಸಿದರೆ ಆಗ ಆ ವಸ್ತುವನ್ನು ಒಬ್ಬರಿಂದ ಇನ್ನೊಬ್ಬರು ಕದಿಯುತ್ತಲೇ ಹೋಗುವುದರಿಂದ ಅದನ್ನು ಯಾರೂ ಅನುಭವಿಸಲಾರರು. ಆದ್ದರಿಂದ ಕಾಂಟ್ ಹೇಳುವುದೆಂದರೆ ನೈತಿಕ ಆದೇಶಗಳು ಪ್ರಶ್ನಾತೀತ. ಬೈಬಲ್ ನ ಹೇಳಿಕೆಯ ಮಾದರಿಯಂತೆ (ಆಂ ಣಟಿಣಾಂ ಂಣುಜಢಿ ಚಿ ಥಿಂಣ ತಿಂಣಟಜ ,ಚಿತಜ ಣುಜಟ ಜಂ ಣಟಿಣಾಂ ಥಿಂಣ– ಇತರರು ನಿನ್ನೊಂದಿಗೆ ಏನು ಮಾಡಬೇಕೆಂದು– ಹೇಗಿರಬೇಕೆಂದು– ನೀನು ಅಪೇಕ್ಷಿಸುತ್ತೀಯೋ ನೀನು ಇತರರೊಂದಿಗೆ ಅದನ್ನೇ ಮಾಡು– ಅಂತೆಯೇ ಇರು.) ನಾವು ಇತರರು ನಮ್ಮ ವಸ್ತುಗಳನ್ನು ಕದಿಯಬಾರದೆಂದರೆ ನಾವು ಯಾರ ವಸ್ತುವನ್ನೂ ಕದಿಯಬಾರದು.

ಎಂದರೆ ನೈತಿಕ ಮೌಲ್ಯಗಳು ಸಾರ್ವತ್ರಿಕ ಆದೇಶಗಳಂತೆ. ಇವುಗಳಿಗೆ ವಿನಾಯಿತಿ ಇಲ್ಲ. ಹಾಗೆ ಯಾರಾದರೂ ವಿನಾಯತಿಯನ್ನು ಅಪೇಕ್ಷಿಸಿದರೆ ಏನಾಗುತ್ತದೆ ಎಂಬುದನ್ನು ಸಾಕಷ್ಟು ಪ್ರಚಲಿತವಿರುವ ಈ ಕತೆಯ ಮೂಲಕ ಹೇಳಬಹುದು:

ಒಬ್ಬ ರಾಜ ತಾನಿರುವ ನಗರದ ನಿವಾಸಿಗಳನ್ನು ಪರೀಕ್ಷಿಸಲೆಂದು ಒಂದು ಆಜ್ಞೆ ಮಾಡಿ ಹೀಗೆ ಅರ್ಥ ಬರುವಂತೆ ಡಂಗುರ ಸಾರಿಸಿದ. " ನಾಳೆಯ ದಿನ ಒಂದು ಸತ್ಕಾರ್ಯಕ್ಕಾಗಿ ಹಾಲು ಬೇಕಾಗಿದೆ. ಒಂದು ಸುತ್ತಲೂ ಮರೆ ಮಾಡಿರುವ ಸ್ಥಳದಲ್ಲಿ ಇರಿಸುವ ಒಂದು

ಕಡಾಯಿಗೆ ಪ್ರತಿ ಕುಟುಂಬದ ಮುಖ್ಯಸ್ಥನು ಒಂದು ಸೇರು ಹಾಲನ್ನು ತಂದು ಸುರಿಯಬೇಕು. ಅವನು ಹಾಗೆ ಹಾಲನ್ನು ಸುರಿಯುವುದು ಬೇರೆ ಯಾರಿಗೂ ಕಾಣಬಾರದು. ಹಾಗೆ ಅದು ಬೇರೆ ಯಾರಿಗೂ ಕಾಣದಂತೆ ವ್ಯವಸ್ಥೆ ಮಾಡಲಾಗಿದೆ. ಕಡಾಯಿಯಲ್ಲಿರುವ ಹಾಲನ್ನು ಸುರಿಯುವವರು ನೋಡುವಂತಿಲ್ಲ. ಹಾಗೆ ನೋಡಲು ಆಗದಂತೆ ವ್ಯವಸ್ಥೆ ಮಾಡಲಾಗಿದೆ." ಮಾರನೆಯ ದಿನ ಎಲ್ಲಾ ಕುಟಂಬ ಪ್ರಮುಖರೂ ರಾಜನ ಆಜ್ಞೆಯನ್ನು ಪಾಲಿಸಿದ ನಂತರ ಹಲವರ ಸಮ್ಮುಖದಲ್ಲಿ ರಾಜ ಕಡಾಯಿಯನ್ನು ತರೆಸಿ ನೋಡಿದ. ಆಶ್ಚರ್ಯ ಎಂದರೆ ಕಡಾಯಿಯಲ್ಲಿ ಶುದ್ದ ನೀರೇ ತುಂಬಿತ್ತು. ಏಕೆಂದರ ಪ್ರತಿಯೊಬ್ಬರೂ ಏನು ಯೋಚಿಸಿದ್ದ್ರರೆಂದರೆ ಎಲ್ಲರೂ ಹಾಲು ಹಾಕುವಾಗ ನಾನೊಬ್ಬ ನೀರು ಸುರಿದರೆ ಏನು ತಾನೇ ಹಾನಿಯಾದೀತು, ಅದು ಯಾರಿಗೆ ತಾನೇ ಗೊತ್ತಾದೀತು ಎಂದು. .

ಈ ಕತೆ ಕಾಂಟ್ ಅವರ ಕೆಟಗಾರಿಕಲ್ ಇಂಪರೆಟಿವ್ ತತ್ವದ ಮಹತ್ವವನ್ನು ವಿಲೋಮಕ್ರಮದಲ್ಲಿ ಹೇಳುತ್ತದೆ ಎನ್ನಬಹುದು. ನಾನೊಬ್ಬ ತಪ್ಪು ಮಾಡಿದರೆ, ನಿಯಮ ಪಾಲಿಸದೆ ಇದ್ದರೆ ಏನು ತಾನೇ ಆಗುತ್ತೆ ಎನ್ನುವ ಪ್ರವೃತ್ತಿ ನಮ್ಮೆಲ್ಲರಲ್ಲೂ ಅಡಗಿರುತ್ತದೆ ಅನ್ನುವುದನ್ನೇ ಹೇಳುತ್ತಾ ಮೇಲಿನ ಕತೆ ನಮ್ಮನ್ನು ಎಚ್ಚರಿಸುತ್ತದೆ.

ಕೆಲವು ದಶಕಗಳ ಹಿಂದೆ ಶಾಲೆಗಳಲ್ಲಿ ನೀತಿಬೋಧೆಗೆ ಮೀಸಲಾದ ಸಮಯವಿರುತ್ತಿತ್ತು. ಆದರೆ ನೀತಿಬೋಧೆಯನ್ನು ಪ್ರಶ್ನೆ ಮಾಡುವ ಒಂದು ಪ್ರವೃತ್ತಿ ನಂತರ ಕಂಡುಬಂದಿತು. ಒಂದು ಅರ್ಥದಲ್ಲಿ ಈ ರೀತಿಯ ನೀತಿಬೋಧೆ ಅರ್ಥಹೀನ ಎನ್ನುವ ವಿಚಾರ ಮೂಡಿತು. ಹಾಗೆ ನೀತಿ ಹೇಳುವ ಪರಿಪೂರ್ಣತೆ ಇರುವ ಯೋಗ್ಯರು ಯಾರು ತಾನೇ ಇರುತ್ತಾರೆ ಎಂಬ ಸಂಶಯವೇ ನೀತಿಬೋಧೆಯ ಪರಿಪಾಠವನ್ನೇ ಸಂಶಯದಿಂದ ನೋಡುವಂತೆ ಮಾಡಿತು. ಬಹುಶಃ ಅನೇಕರು ಬಲ್ಲ ಒಂದು ಕತೆ ಹೀಗಿದೆ:

ಒಂದು ದಿನ ಮನೆಯ ಯಜಮಾನ ಕಛೇರಿಯಿಂದ ಮನೆಗೆ ಬಂದಾಗ ಅವನ ಮಗ, ಪ್ರಾಥಮಿಕ ಶಾಲೆಗೆ ಹೋಗುವ ಪುಟ್ಟ ಬಾಲಕ, ಅಳುತ್ತಾ ಇರುತ್ತಾನೆ. ಅಪ್ಪ ಕೇಳುತ್ತಾನೆ, " ಯಾಕೋ ಅಳ್ತಾ ಇದೀಯ?"

"ಅಮ್ಮ ಹೊಡೆದು.ರ"

ಅವನು ಹೆಂಡತಿಯನ್ನು ಕೇಳ್ತಾನೆ, "ಯಾಕೇ ಪಾಪ ಮಗೂಗೆ ಹೊಡೆದೆ?"

“ ಮತ್ತೇನ್ರೀ ಮಾಡಲಿ? ಎಂಥಾ ಕೆಲಸ ಮಾಡಿದಾನೆ ಗೊತ್ತೇನ್ರಿ ನಿಮ್ಮ ಮುದ್ದು ಮಗ? ಅವನ ಪಕ್ಕ ಕೂತಿದ್ದ ಹುಡುಗನ ಪೆನ್ಸಿಲ್ ತಗೊಂಡಿದ್ನಂತೆ. ಟೀಚರ್ ನನಗೆ ಫೋನ್ ಮಾಡಿ ನಿಮ್ಮ ಮಗಂಗೆ ಸರಿಯಾದ ಬುದ್ದಿ ಹೇಳ್ಕೊಡಿ ಅಂದ್ರು. ಎಂಥಾ ಅವಮಾನಾಯ್ತು ನಂಗೆ!”

ಅಪ್ಪ ಮಗನಿಗೆ ಬುದ್ದಿ ಹೇಳ್ತಾನೆ, “ ಅಯ್ಯೋ ಮಗು, ಆ ಹುಡುಗನ ಪೆನ್ಸಿಲ್ ಯಾಕೋ ತಗೊಂಡೆ? ಹಾಗೆಲ್ಲಾ ತಗೋ ಬಾರದು ಕಣೋ. ಬೆಳಿಗ್ಗೆ ನೀನು ನನಗೆ ಪೆನ್ಸಿಲ್ ಬೇಕು ಅಂತ ಹೇಳಿದ್ರೆ ನಾನು ನಿನಗೆ ಆಫೀಸಿಂದ ಒಂದು ಡಜನ್ ಪೆನ್ಸಿಲ್ ತಂದು ಕೊಡ್ತಾ ಇದ್ನಲ್ಲೋ!”

ನೈತಿಕತೆ ಎನ್ನುವುದು ಇತರರು ಹೇಗೆ ಇರಬೇಕು ಎಂಬುದರ ಮಾರ್ಗಸೂಚಿ ಎಂಬ ಅವ್ಯಕ್ತ ಭಾವನೆ ಎಲ್ಲರಲ್ಲೂ ಇರಲು ಸಾಧ್ಯ. ಈ ಕತೆ ಆ ಅರ್ಥವನ್ನೂ ಕೊಡಬಹುದು. ಅಲ್ಲದೆ ಇದು ನೀತಿಪಾಠವನ್ನು ಗೇಲಿ ಮಾಡುವ ಪ್ರಸಂಗವಾಗಬಹುದು. ನೈತಿಕ ಮೌಲ್ಯಗಳ ಬಗೆಗಿನ ದೃಷ್ಟಿಕೋನ ಹೇಗಾಗಿದೆ ಎಂದರೆ, ನೀತಿ ಹೇಳುವುದರ ಹಿಂದೆ ವಂಚಕ ಉದ್ದೇಶಗಳಿರಬಹುದು ಎನ್ನುವ ಸಿನಿಕತನವೂ ಸಾಧ್ಯ. ನಾನು ಹಿಂದೆ ಉಲ್ಲೇಖಿಸಿರುವ ಪುರಾತನ ಕೃತಿಯಾದ ಪಂಚತಂತ್ರದಲ್ಲಿಯ ಒಂದು ಕತೆಯ ಮಾರ್ಪಡಿಸಿದ ರೂಪ ಹೀಗಿದೆ.

ಒಬ್ಬ ಗುರು. ಅವನಿಗೆ ಆಷಾಢಭೂತಿ ಎಂಬ ಶಿಷ್ಯ. ಗುರುವು ಅವನಿಗೆ ಯರಾದರೂ ಕೊಡುವ ಕಾಣಿಕೆಯ ನಾಣ್ಯಗಳನ್ನು ಒಂದು ಚದ್ದರುವಿನಲ್ಲಿ ಸೇರಿಸಿ ಹೊಲಿದು ಆ ಚದ್ದರುವನ್ನು ತನ್ನ ಬಳಿಯೇ ಇಟ್ಟುಕೊಳ್ಳುತ್ತಿರುತ್ತಾನೆ. ಅವನ ಶಿಷ್ಯನಿಗೆ ಈ ಹಣವನ್ನು ಹೇಗಾದರೂ ಲಪಟಾಯಿಸಬೇಕೆಂದು ಆಸೆಯಾಗುತ್ತದೆ.

ಒಂದು ದಿನ ಗುರುಶಿಷ್ಯರು ಒಂದು ಊರಿನಲ್ಲಿ ಒಬ್ಬರ ಮನೆಯಲ್ಲಿ ಉಳಿದು ಮಾರನೆಯ ದಿನ ಮುಂದಕ್ಕೆ ಪ್ರಯಾಣ ಬೆಳೆಸುತ್ತಾರೆ. ಸ್ವಲ್ಪ ದೂರ ಕ್ರಮಿಸಿದ ನಂತರ ಶಿಷ್ಯ ಗುರುವಿಗೆ ಹೇಳುತ್ತಾನೆ, “ಗುರುಗಳೇ ನನ್ನಿಂದ ಮಹಾ ಪ್ರಮಾದವಾಯಿತು. ನಾವು ನಿನ್ನೆ ಉಳಿದಿದ್ದಲ್ಲಿ ನಮಗೆ ಹುಲ್ಲಿನ ಹಾಸಿಗೆ ಮಾಡಿ ಕೊಟ್ಟಿದ್ದರಲ್ಲಾ, ಅದರ ಒಂದು ಹುಲ್ಲು ಕಡ್ಡಿ ನನ್ನ ವಸ್ತ್ರಕ್ಕೆ ಅಂಟಿಕೊಂಡಿದೆ. ಅದನ್ನು ಹಿಂದಿರುಗಿಸಲು ನಾನು ಈಗಿಂದೀಗಲೇ ಹೋಗುತ್ತೇನೆ.”

ಗುರು ಹೇಳುತ್ತಾನೆ, “ ಅಯ್ಯೋ ಹುಚ್ಚಾ! ಆ ಹುಲ್ಲು ಕಡ್ಡಿ ತೆಗೆದು ಬಿಸಾಕಿ ಸುಮ್ಮನೆ ಬಾ.”

“ ಏನು ಗುರುಗಳೇ ನೀವು ಹೇಳುವುದು? ಸಂಸಾರಿಗಳಿಗೆ ಅದು ಒಂದು ಹುಲ್ಲು ಕಡ್ಡಿ. ಆದರೆ ನಮಗೆ, ಸನ್ಯಾಸಿಗಳಿಗೆ, ಅದು ಬೇರೆಯವರ ಆಸ್ತಿ. ಗುರುಗಳೇ ತಮಗೆ ತಿಳಿಯದೇ

ಸಮಲೋಷ್ಟಾಶ್ಮ ಕಾಂಚನಃ ಎಂದು? ನಾನು ನಿಮಗೆ ಭಗವದ್ಗೀತೆಯನ್ನು ಬೋಧಿಸಬೇಕೇ? ನಮಗೆ ಹುಲ್ಲಿನ ಕಡ್ಡಿ, ಕಲ್ಲು, ಮಣ್ಣು, ಚಿನ್ನದ ನಾಣ್ಯ ಎಲ್ಲವೂ ಒಂದೆ," ಎನ್ನುತ್ತಾ ಬೇಗ ಬರುವೆ ಎಂದು ಹಿಂದಕ್ಕೆ ಹೋಗುತ್ತಾನೆ.

ಗುರುವಿಗೆ ಈ ಶಿಷ್ಯನ ಬಗೆಗೆ ಅಭಿಮಾನದ ಭಾವನೆ ಉಕ್ಕುತ್ತದೆ. ಇಂತಹ ಪ್ರಾಮಾಣಿಕನಾದ ತತ್ವಜ್ಞಾನ, ತತ್ವನಿಷ್ಠೆಗಳಿರುವ ಶಿಷ್ಯ ತನಗೆ ಸಿಕ್ಕಿರುವುದು ತನ್ನ ಪುಣ್ಯದ ಫಲ ಎಂದುಕೊಳ್ಳುತ್ತಾನೆ. ಶಿಷ್ಯ ಹಿಂದಿರುಗಿದ ನಂತರ ಇಬ್ಬರೂ ಮುಂದೆ ಪ್ರಯಾಣ ಬೆಳೆಸುತ್ತಾರೆ. ನದಿಯೊಂದನ್ನು ಸಮೀಪಿಸುತ್ತಾರೆ. ಗುರುವು ನಾಣ್ಯಗಳಿದ್ದ ಚದ್ದರುವನ್ನು ಶಿಷ್ಯನ ಕೈಗೆ ನೀಡಿ ನದಿಯಲ್ಲಿ ಸ್ನಾನ ಮಾಡಿ ಕಣ್ಣು ಮುಚ್ಚಿ ನೆಮ್ಮದಿಯಿಂದ ಧ್ಯಾನ ಮಾಡಲು ತೊಡಗುತ್ತಾನೆ. ಆಷಾಢಭೂತಿ ತನ್ನ ಯೋಜನೆ ಫಲಿಸಿದ್ದಕ್ಕೆ ತನ್ನ ಬಗೆಗೇ ಹೆಮ್ಮೆ ಪಡುತ್ತಾ ನಾಣ್ಯಗಳಿದ್ದ ಚದ್ದರನ್ನು ತೆಗೆದುಕೊಂಡು ಓಡಿ ಹೋಗುತ್ತಾನೆ.

ಆಷಾಢಭೂತಿಯ ಕತೆ ಸಾಕಷ್ಟು ಪ್ರಾಚೀನವಾದರೂ ಅದು ಎಲ್ಲಾ ಕಾಲಕ್ಕೂ ಪ್ರಸ್ತುತ. ಆದರೆ ಈ ಕತೆಯ ಪರಿಣಾಮದಲ್ಲಿ ಒಂದು ತೊಡಕಿದೆ. ಇದು ಆದರ್ಶವ್ಯಕ್ತಿತ್ವದ ಸೋಗು ಹಾಕಿಕೊಂಡು ವಂಚಿಸುವವರ ಬಗೆಗೆ ಎಚ್ಚರಿಸುತ್ತದೆ, ನಿಜ. ಆದರೆ ಮೌಲ್ಯಗಳ ಬಗೆಗಿನ ಜಿಜ್ಞಾಸೆಯನ್ನೇ ಪ್ರಶ್ನಿಸುವಂತೆ ಮಾಡಿದರೆ? ಸಂಶಯವಾಗಲೀ, ಸಂದೇಹವಾದವಾಗಲೀ ತಪ್ಪಲ್ಲ. ಆದರೆ ಸಂದೇಹದ ಗುರಿ ಹೆಚ್ಚಿನ ದೃಢತೆಯೊಂದಿಗೆ ಸತ್ಯದ, ನಿಜವಾದ ಮೌಲ್ಯಗಳ ಪ್ರತಿಪಾದನೆ ಆಗಿರಬೇಕು. ಅದು ಸಿನಿಕತನದಲ್ಲಿ ಕೊನೆಯಾಗಬಾರದು.

ಇಲ್ಲಿ ಹೇಳಲಾಗಿರುವ ಮೂರೂ ಸರಳ ಕತೆಗಳು ನೈತಿಕ ಮೌಲ್ಯಗಳ ಕುರಿತಾದ ಭಿನ್ನ ಸಂಗತಿಗಳನ್ನು ಹೇಳುತ್ತವೆ: ಮೊದಲನೆಯ ಕತೆ ನೈತಿಕ ಮೌಲ್ಯಗಳು ಸಾರ್ವತ್ರಿಕವಾದ ಪ್ರಶ್ನಾತೀತ ಆಜ್ಞಾರ್ಥಕಗಳು ಎಂದು ಹೇಳಿದರೆ, ಎರಡನೆಯ ಕತೆ, ನೈತಿಕ ಆತ್ಮಾವಲೋಕನದ ಕೊರತೆಯನ್ನು ಗೇಲಿ ಮಾಡುತ್ತದೆ; ಮೂರನೆಯದು ನೈತಿಕ ಆಷಾಢಭೂತಿತನವನ್ನು ಎತ್ತಿ ತೋರಿಸುತ್ತದೆ.

ಜೀವನ ಮೌಲ್ಯಗಳ ಪರಿಕಲ್ಪನೆ ನೈತಿಕ ಮೌಲ್ಯಗಳ ಚೌಕಟ್ಟನ್ನೂ ಸಹ ಮೀರಿ ಹೋಗುತ್ತದೆ. ಉದಾಹರಣೆಗೆ ಜ್ಞಾನಾರ್ಜನೆಯಲ್ಲಿ ಕುತೂಹಲವನ್ನೂ ಒಂದು ಶೈಕ್ಷಣಿಕ ಮೌಲ್ಯ ಎನ್ನಬಹುದು. ಹಾಗೆಯೇ ಪ್ರಶ್ನಿಸುವ ಮನೋಭಾವವೂ ಸಹ. ಈ ಎಲ್ಲಾ ಸಂಗತಿಗಳ ಚರ್ಚೆಗೆ ಇಲ್ಲಿ ಅವಕಾಶವಿಲ್ಲವಾದುದರಿಂದ ಇಷ್ಟನ್ನು ಹೇಳಬಹುದು. ಸಾಹಿತ್ಯವು ಬದುಕಿನ

ನಿರೂಪಣೆಯೇ ಆದುದರಿಂದ ಅದು ಬದುಕಿನ ಎಲ್ಲಾ ಮೌಲ್ಯಗಳ ವಾಹಕವೂ ಆಗಿರುತ್ತದೆ. ನನ್ನ ವಾದವೆಂದರೆ ಉತ್ತಮ ಸಾಹಿತ್ಯ ಕೃತಿಗಳು ನೇರವಾಗಿ ಅಥವಾ ಪರೋಕ್ಷವಾಗಿ ಮೌಲ್ಯಜಿಜ್ಞಾಸೆಗೆ ನಮ್ಮನ್ನು ತೊಡಗಿಸುತ್ತವೆ. ಜೀವನ ವಿರೋಧಿಯಾದ ಮೌಲ್ಯಗಳನ್ನು ಪ್ರಶ್ನಿಸುತ್ತಾ ಜೀವನಪರ ಮೌಲ್ಯಗಳನ್ನು ಎತ್ತಿಹಿಡಿಯುತ್ತವೆ. ಆದುದರಿಂದ ಅವು ನಮಗೆ ಮುಖ್ಯವಾಗುತ್ತವೆ. ಸಾಹಿತ್ಯದ ಓದು ನಮ್ಮ ಮೌಲ್ಯಪ್ರಜ್ಞೆಯನ್ನು ಜಾಗೃತವಾಗಿ ಇಡಬಹುದು. ಆದುದರಿಂದ ಸಾಹಿತ್ಯದ ಓದಿನ ಅಭ್ಯಾಸವನ್ನು ಬೆಳೆಸಿಕೊಳ್ಳುವುದು ಅಪೇಕ್ಷಣೀಯ. ಶಿಕ್ಷಣವು ಪ್ರಾಥಮಿಕ ಹಂತದಿಂದಲೇ ಅಂತಹ ಒಂದು ಅಭ್ಯಾಸವನ್ನು ಬೆಳಸಿಕೊಳ್ಳುವ ಮಾರ್ಗವಾಗಬಹುದು. ಹಾಗೆ ಆಗಬೇಕಾದರೆ ಸಾಹಿತ್ಯದ ಓದು ಶಿಕ್ಷಣದ ಭಾಗವಾಗಬೇಕು.

ಇಲ್ಲಿ ನಾನು ಸಾಹಿತ್ಯವನ್ನು ಓದಿದವರು ಇತರರಿಗಿಂತ ಹೆಚ್ಚು ನೈತಿಕ ನಡೆಯನ್ನು ಹೊಂದಿರುತ್ತಾರೆ ಎಂಬ ಸರಳ ತೀರ್ಮಾನಕ್ಕೆ ಬರುವುದಿಲ್ಲ. ಅಂತಹ ಸರಳ ಗ್ರಹಿಕೆಯನ್ನು ನಾನು ವಿರೋಧಿಸುತ್ತೇನೆ. ಉತ್ತಮ ಸಾಹಿತ್ಯದ ಓದು ಶಿಕ್ಷಣಾರ್ಥಿಯಲ್ಲಿ ಮೌಲ್ಯಪ್ರಜ್ಞೆಯನ್ನು ಬೆಳೆಸುವಲ್ಲಿ ಉಪಯುಕ್ತವಾಗಬಲ್ಲದು. ಭಾಷೆಯು ವ್ಯಕ್ತಿಗಳ, ಸಂಸ್ಥೆಗಳ, ಸಂಸ್ಕೃತಿಗಳ, ದೇಶಗಳ ನಡುವೆ ಸಂಪರ್ಕಮಾಧ್ಯಮವಾಗುತ್ತದೆ. ಆ ಸಂಪರ್ಕವು ಕೇವಲ ವ್ಯಾವಹಾರಿಕವಾಗದೆ ಮೌಲ್ಯಗಳ ಸಂವರ್ಧನೆಯ ದೃಷ್ಟಿಯನ್ನು ಒಳಗೊಂಡಿದ್ದರೆ ಮಾನವನ ಬದುಕು ಹೆಚ್ಚು ಮೌಲ್ಯಯುತವೂ, ಅರ್ಥಪೂರ್ಣವೂ ಆಗಬಹುದಾದ ಸಾಧ್ಯತೆ ಇರುತ್ತದೆ.

ಪಠ್ಯಗಳ ಆಯ್ಕೆ

ಇನ್ನು ಮುಖ್ಯವಾದ ಒಂದು ಪ್ರಶ್ನೆಯೆಂದರೆ ಕಲಿಕೆಯ ಯಾವಯಾವ ಹಂತಗಳಲ್ಲಿ ಯಾವ ಯಾವ ಸಾಹಿತಿಕ ಪಠ್ಯಗಳನ್ನು ಬೋಧನೆಯಲ್ಲಿ ಅಳವಡಿಸಿಕೊಳ್ಳಬೇಕು ಎನ್ನುವುದು. ಈ ಪ್ರಶ್ನೆಗೆ ಉತ್ತರ ಕಷ್ಟವಲ್ಲ. ಶಿಶುವಿಹಾರದ ಹಂತದಿಂದ ಕಾಲೇಜಿನ ಹಂತದವರೆಗೆ ಸೂಕ್ತವಾದ ಪಠ್ಯಗಳನ್ನು ಆಯಬಹುದಾಗಿದೆ. ಈಸೋಪನ ಕಥೆಗಳು, ಪಂಚತಂತ್ರ, ರಾಮಾಯಣ, ಮಹಾಭಾರತ, ಇಲಿಯಡ್ ಮತ್ತು ಒಡಿಸ್ಸಿ, ಭಾರತೀಯ ಹಾಗೂ ಪಾಶ್ಚಾತ್ಯ ಕಾವ್ಯಗಳು, ಕಥಾನಕಗಳು, ಕಾಳಿದಾಸ ಹಾಗೂ ಷೇಕ್ಸಪಿಯರ್ ನ ನಾಟಕಗಳು, ಕುವೆಂಪು,

ಶಿವರಾಮ ಕಾರಂತ, ತೇಜಸ್ವಿ ಮೊದಲಾದ ಲೇಖಕರ ಕಾದಂಬರಿಗಳು, ಕುಮಾರವ್ಯಾಸ, ಕನಕದಾಸ, ಬೇಂದ್ರೆ, ಶಿವರುದ್ರಪ್ಪ, ನಿಸಾರ್ ಅಹಮದ್ ಮುಂತಾದ ಅನೇಕ ಕವಿಗಳ ಕಾವ್ಯ, ಲಂಕೇಶ್, ಶಿವಪ್ರಸಾದ್ ಮುಂತಾದ ವಿವಿಧ ಲೇಖಕರ ನಾಟಕಗಳು, ಪ್ರವಾಸ ಸಾಹಿತ್ಯ ಹೀಗೆ ವಿವಿಧ ಹಂತಗಳಿಗೆ ಸೂಕ್ತವಾಗುವ ಪಠ್ಯಗಳು ಲಭ್ಯವಿರುವುದು ಒಂದು ಆಶಾದಾಯಕ ಸಂಗತಿಯಾಗಿದೆ. (ಇಲ್ಲಿ ಸೂಚಿಸಿರುವ ಲೇಖಕರ ಹೆಸರುಗಳು ಕೇವಲ ಪ್ರಾತಿನಿಧಿಕ; ನಮ್ಮ ನಾಡಿನ ಅಥವಾ ವಿಶ್ವದ ಎಲ್ಲಾ ಶ್ರೇಷ್ಠ ಲೇಖಕರ ಹೆಸರುಗಳನ್ನು ಹೇಳುವುದು ಇಲ್ಲಿ ಅಸಾಧ್ಯ ಹಾಗೂ ಅನಗತ್ಯ.) ಈ ಪಠ್ಯಗಳನ್ನು ಕಲಿಕೆಗೆ ಪೂರಕವಾಗುವ ಕಲಿಕಾಪಠ್ಯಗಳಾಗಿ ಮಾರ್ಪಡಿಸುವ ಕಾರ್ಯ ಕೆಲವೊಮ್ಮೆ ಆಗಬೇಕಾಗಬಹುದು. ಈ ಕಾರ್ಯವು ತಜ್ಞರ ನಿರ್ದೇಶನದಲ್ಲಿ ಹಿರಿಯ, ನುರಿತ ಆಧ್ಯಾಪಕರ ಮಾರ್ಗದರ್ಶನದಲ್ಲಿ ಅಧ್ಯಾಪಕರ ಕಾರ್ಯಾಗಾರಗಳಲ್ಲಿ ಸಾಧ್ಯವಾಗಬಲ್ಲದು.

ಇಲ್ಲಿ ಕಲಿಕೆಯ ಯಾವ ಹಂತಗಳಲ್ಲಿ ಯಾವ ಸ್ವರೂಪದ ಸಾಹಿತಿಕ ಪಠ್ಯಗಳನ್ನು ಬೋಧನೆಯಲ್ಲಿ ಅಳವಡಿಸಿಕೊಳ್ಳಬೇಕು ಎಂಬುದು ತಜ್ಞರು ಚರ್ಚಿಸಿ ನಿರ್ಧರಿಸಬೇಕಾದ ವಿಚಾರವಾಗಿದೆ. ಇಲ್ಲಿ ಪ್ರಾಸಂಗಿಕವಾಗಿ ಕೆಲವು ಸಲಹೆಗಳನ್ನು ನೀಡಬಹುದು. ಪ್ರಾಥಮಿಕ ಹಂತದಲ್ಲಿ ಮಕ್ಕಳಿಗೆ ಭಾಷೆಯ ಬಗೆಗೆ ಒಲವು ಮೂಡಿಸಬಲ್ಲ, ಪ್ರಾಸ, ಅನುಪ್ರಾಸ, ನಾದಗುಣಗಳಿರುವ ಸುಲಭವಾಗಿ ಕಲಿಯಬಲ್ಲ ಸ್ವಾರಸ್ಯಕರ ಕತೆಗಳಿರುವ ಪದ್ಯಗಳನ್ನು, ಮಕ್ಕಳ ಮನಸ್ಸಿಗೆ ಖುಷಿ ಕೊಡುವ ಹಾಸ್ಯಪೂರ್ಣ ಗದ್ಯದ ಕತೆಗಳನ್ನೂ ಬೋಧಿಸುವುದು ಸೂಕ್ತ. ಕ್ರಮೇಣ ಸಾಹಸಮಯ ಕಲ್ಪನೆಯ ಕತೆಗಳನ್ನೂ ಪರಿಚಯಿಸಬಹುದು. ಪ್ರೌಢಶಾಲೆಯ ಹಂತಕ್ಕೆ ಬರುವ ಹೊತ್ತಿಗೆ ಕಾಳಿದಾಸ, ಷೇಕ್‌ಸ್‌ಪಿಯರ್, ಡಿಕನ್ಸ್, ಕುವೆಂಪು, ಕಾರಂತರ ಕೆಲವು ಕೃತಿಗಳನ್ನು ಹಾಗೂ ಅವುಗಳಿಗೆ ಸಮಾನವಾದ ಇತರ ಕೃತಿಗಳನ್ನು ಪರಿಚಯಿಸಬಹುದು. ಪದವಿ ಹಂತದಲ್ಲಿ ಸಮಾಜದಲ್ಲಿ ರೂಢಿಗತವಾಗಿರುವ ಮೌಲ್ಯಗಳನ್ನು ಪ್ರಶ್ನಿಸುವಂತಹ ಕೃತಿಗಳನ್ನು ಅಧ್ಯಯನ ಮಾಡಬಹುದು. ಸಂಕೀರ್ಣವಾದ, ಚರ್ಚಾಸ್ಪದವಾದ ಸಾಹಿತ್ಯಕೃತಿಗಳ ಬಗೆಗೆ ವಿಮರ್ಶಾತ್ಮಕ ನಿಲುವು ತೆಗೆದುಕೊಳ್ಳಬೇಕಾದರೆ ವಿದ್ಯಾರ್ಥಿಗಳು ಪ್ರಬುದ್ಧ ಮನಃಸ್ಥಿತಿಯನ್ನು ತಲುಪಿರಬೇಕಾಗುತ್ತದೆ. (ಉದಾಹರಣೆಗೆ ಕುವೆಂಪು ಅವರ ಕಾನೂರು ಹೆಗ್ಗಡತಿ ಕಾದಂಬರಿಯನ್ನೋ, ಯು. ಆರ್. ಅನಂತಮೂರ್ತಿ ಅವರ ಸಂಸ್ಕಾರ ಕಾದಂಬರಿಯನ್ನೋ, ವಸುಧೇಂದ್ರ ಅವರ ಸಲಿಂಗಸಂಬಂಧಗಳ ಕುರಿತಾದ

ಕೃತಿಗಳನ್ನೋ ಚರ್ಚಿಸಬೇಕಾದರೆ ವಿದ್ಯಾರ್ಥಿಗಳಲ್ಲಿ ಒಂದು ಮಾನಸಿಕ ಪ್ರೌಢಿಮೆ ಇರಬೇಕಾಗುತ್ತದೆ.)

ಶಿಕ್ಷಕರ ಶಿಕ್ಷಣದಲ್ಲಿ ಸಾಹಿತ್ಯ

ಶಿಕ್ಷಕರ ತರಬೇತಿಯಲ್ಲಿ ಸಾಹಿತ್ಯದ ಅಧ್ಯಯನಕ್ಕೆ ವಿಶೇಷವಾದ ಒತ್ತನ್ನು ನೀಡುವುದು ಸೂಕ್ತ ಎನ್ನುವುದು ನನ್ನ ಭಾವನೆ. ಈ ತರಬೇತಿ ಶಿಕ್ಷಕರನ್ನು ತಯಾರು ಮಾಡುವ ಡಿಪ್ಲೋಮಾ ಮತ್ತು ಪದವಿ ತರಗತಿಗಳಿಗೆ ಸೀಮಿತವಲ್ಲ; ಅದು ಕಾರ್ಯಾಗಾರಗಳು, ವಿಚಾರ ಸಂಕಿರಣಗಳು, ಇತರರೊಂದಿಗೆ ದಿನನಿತ್ಯದ ಚರ್ಚೆ, ಹೀಗೆ ಶಿಕ್ಷಕರು ವೃತ್ತಿ ನಿರತರಾಗಿರುವಾಗ ಭಾಗವಸಿಸುವ ಶೈಕ್ಷಣಿಕ ಚಟುವಟಿಕೆಗಳಿಗೂ ವಿಸ್ತರಿಸುತ್ತದೆ. ಒಟ್ಟಾರೆಯಾಗಿ ಶಿಕ್ಷಣದಲ್ಲಿ, ಅದರಲ್ಲೂ ವಿಶೇಷವಾಗಿ ಭಾಷಾ ಶಿಕ್ಷಣದಲ್ಲಿ ಸಾಹಿತ್ಯಕ್ಕಿರುವ ಪಾತ್ರದ ಕುರಿತಾದ ಅರಿವನ್ನು ಹೆಚ್ಚು ಹೆಚ್ಚಾಗಿ ವಿಸ್ತರಿಸುವುದು ಅರ್ಥಪೂರ್ಣ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ೨೦೦೫ರ ಮೊದಲ ಅಧ್ಯಾಯದಲ್ಲಿ ಬರುವ ಒಂದು ಹೇಳಿಕೆಯನ್ನು ಇಲ್ಲಿ ಉದ್ದರಿಸುವುದು ಸೂಕ್ತ ಎನಿಸುತ್ತದೆ.

ಏನೇ ಹೇಳುವುದಾದರೂ, ನಾವು ಮಾನವರ ಪರಸ್ಪರ ಅವಲಂಬನೆಯನ್ನು ಪುನರುಚ್ಚರಿಸುವುದು ಅಗತ್ಯ, ಮತ್ತು ಟಾಗೂರ್ ಅವರು ಹೇಳುವಂತೆ ನಾವು ನಮ್ಮ ಅತ್ಯಮೂಲ್ಯ ಸಂತಸವನ್ನು ಯಾವಾಗ ಸಾಧಿಸುತ್ತೇವೆ ಎಂದರೆ ನಮ್ಮನ್ನು ನಾವು ಇತರರ ಮೂಲಕ ಸಾಕ್ಷಾತ್ಕರಿಸಿಕೊಂಡಾಗ(ನನ್ನ ಅನುವಾದ, ಪು.೨).

ಈ ಮಾತು ನಮ್ಮನ್ನು ವ್ಯಕ್ತಿ ಮತ್ತು ಸಮಷ್ಟಿಯ ನಡುವಿನ ಸಂಬಂಧದ ಜಿಜ್ಞಾಸೆಗೆ ತೊಡಗಿಸಬಹುದು. ಇಲ್ಲಿ ಸೂಕ್ಷ್ಮವಾಗಿ ಹೇಳಬಹುದಾದ ಒಂದು ಮಾತೆಂದರೆ, ನಮ್ಮನ್ನು ನಾವು ಇತರರ ಮೂಲಕ ಭಾವನಾತ್ಮಕವಾಗಿ ಸಾಕ್ಷಾತ್ಕರಿಸಿಕೊಳ್ಳಬಹುದಾದ ಶಕ್ತಿಯುತ ಮಾಧ್ಯಮ ಎಂದರೆ ಸಾಹಿತ್ಯ.

ಉಪಸಂಹಾರ

ಉಪಸಂಹಾರಾರ್ಥದಲ್ಲಿ ಹೇಳಬಹುದಾದುದು ಎಂದರೆ ಸಾಹಿತ್ಯದ ಮೂಲಕ ನಡೆಯುವ ಭಾಷಾಶಿಕ್ಷಣವು, ಶಿಕ್ಷಣದ ರೂಪುರೇಷೆಗಳನ್ನು, ಗುರಿ ಹಾಗೂ ಸಾಧ್ಯತೆಗಳನ್ನು, ಹಾಗೂ ಜೀವನದ ಅರ್ಥವಂತಿಕೆಯನ್ನು ವಿಸ್ತರಿಸಲು ಸಾಧ್ಯ. ಇತ್ತೀಚೆಗೆ ಭಾಷಾಶಿಕ್ಷಣದಲ್ಲಿ

ಸಾಹಿತ್ಯವನ್ನು ಬಳಸಿಕೊಳ್ಳುವುದರ ಬಗೆಗೆ ಒಲವು ಪುನಃ ಮೂಡುತ್ತಿದೆಯಾದರೂ ಅಲ್ಲಿ ಸಾಹಿತ್ಯವನ್ನು ಕೇವಲ ಒಂದು ಉಪಕರಣವಾಗಿ, ತಂತ್ರವಾಗಿ ನೋಡಲಾಗುತ್ತಿರುವ ಬಗೆಗೆ ಸಂದೇಹ ಮೂಡುವುದು ಸಾಧ್ಯ. ಆದರೆ ಸಾಹಿತ್ಯದ ಓದಿನ ಗುರಿ ಸೀಮಿತವಾಗಬಾರದು. ಶಿಕ್ಷಣವನ್ನು ಅದರಲ್ಲೂ ವಿಶೇಷವಾಗಿ ಭಾಷಾಶಿಕ್ಷಣವನ್ನು ನಾನು ಮೊದಲು ಹೇಳಿದ ಒಂದು ಸೀಮಿತ ಉಪಕರಣಾತ್ಮಕ ನೆಲೆಯಿಂದ ಬಿಡುಗಡೆ ಮಾಡಿ ಅದನ್ನು ಒಂದು ವಸ್ತುನಿಷ್ಠ ನೆಲೆಗೆ ಕೊಂಡೊಯ್ಯುವುದು ಸಾಹಿತ್ಯದ ಬೋಧನೆ -ಕಲಿಕೆಗಳಿಂದ ಸಾಧ್ಯ. ಭಾಷೆಯ ಕಲಿಕೆಗೆ ಕೇವಲ ವ್ಯಾವಹಾರಿಕತೆ, ಉದ್ಯೋಗದ ಅವಕಾಶ ಇವುಗಳ ಆಚೆಗೆ ಬಹುರೂಪಿಯಾದ ಆಯಾಮಗಳಿರುತ್ತವೆ. ಅದು ಮನುಷ್ಯನನ್ನು ಒಬ್ಬ ಸಮಾಜಜೀವಿಯಾಗಿ, ಸಾಂಸ್ಕೃತಿಕ ವಾರಸುದಾರನೂ ವಿಮರ್ಶಕನೂ ಆಗಿ ಬೆಳೆಸುವ ಮಹತ್ತಾದ ಉದ್ದೇಶಗಳನ್ನು ಹೊಂದಿರುತ್ತದೆ. ಇಂತಹ ಬಹುರೂಪಿಯಾದ ಸಾಮಥ್ರ್ಯಗಳು ಸಾಹಿತ್ಯದಿಂದ ಸಿಗಬಹುದಾಗಿರುತ್ತದೆ. ಆದುದರಿಂದ ಭಾಷಾ ಶಿಕ್ಷಣದಲ್ಲಿ ಸಾಹಿತ್ಯದ ಪಾತ್ರದ ಕುರಿತಾದ ಚಿಂತನೆ ಮಹತ್ವಪೂರ್ಣವಾದುದಾಗಿದೆ.

ಉಲ್ಲೇಖಗಳು- ಗ್ರಂಥಋಣ;

೧. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ೨೦೦೫

೨. ಕುವೆಂಪು, ಪಕ್ಷಿಕಾಶಿ, ೧೯೪೬, (ಮೈಸೂರು: ಉದಯರವಿ ಪ್ರಕಾಶನ, ೨೦೧೩)

೩. ಗೋಪಾಲ ಕೃಷ್ಣ ಅಡಿಗ, ಸಮಗ್ರ ಕಾವ್ಯ, (ಬೆಂಗಳೂರು: ಸಪ್ನ ಬುಕ್ ಹೌಸ್, ೨೦೧೫)

೪. ಬೊಳುವಾರು ಮಹಮದ್ ಕುಂಞ (ಸಂ) ತಟ್ಟು ಚಪ್ಪಾಳೆ ಪುಟ್ಟ ಮಗು (ಬೆಂಗಳೂರು: ದಿವ್ಯಾ ಪ್ರಕಾಶನ, ೧೯೯೧).